





# ಪ್ರಥಮಭಾಷೆ-ಕನ್ನಡ


## 10ನೇ ತರಗತಿ








## ವಾರ್ಷಿಕ ಯೋಜನೆ ಮತ್ತು ಪಾಠಯೋಜನೆ









### ಪರಿಕಲ್ಪನೆ ಮತ್ತು ರಚನೆ




ಬಸವರಾಜ.ಟಿ.ಎಂ

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ,ರೂಪನಗುಡಿ  ಬಳ್ಳಾರಿ ಪೂರ್ವ ವಲಯ




**************************************************************************************************************



" ಸಿರಿಗನ್ನಡಂ ನುಡಿನುಡಿಗೆ ಸಿರಿಗನ್ನಡಂ ಮನಮನಕೆ "



*****

# ಪ್ರಥಮಭಾಷೆ–ಕನ್ನಡ


## 10ನೇ ತರಗತಿ










## ವಾರ್ಷಿಕ ಯೋಜನೆ ಮತ್ತು ಪಾಠಯೋಜನೆ











**“ ಸಿರಿಗನ್ನಡಂ ನುಡಿನುಡಿಗೆ ಸಿರಿಗನ್ನಡಂ ಮನಮನಕೆ “**

*****

# 10ನೇ ತರಗತಿ ವಾರ್ಷಿಕ ಕಾರ್ಯ ಯೋಜನೆ

## ವಿಷಯ: ಪ್ರಥಮ ಭಾಷೆ-ಕನ್ನಡ

| ತಿಂಗಳು | ಲಭ್ಯ ಅವಧಿ | ಘಟಕ | ವಿಷಯಾಂಶಗಳು/ಕಲಿಕಾಂಶಗಳು | ಬೋಧನೆಗೆ ನಿಗದಿ ಗೊಳಿಸಿದ ಅವಧಿ | ಪೂರ್ಣ ಗೊಂಡ ದಿನಾಂಕ | ಶಿಕ್ಷಕರ ಸಹಿ | ಮುಖ್ಯ ಶಿಕ್ಷಕರ ಸಹಿ |
|---|---|---|---|---|---|---|---|
| ಜೂನ್ | | ಸೇತುಬಂಧ ಕಾರ್ಯಕ್ರಮ | 1.ನೈದಾನಿಕ ಪರೀಕ್ಷೆ<br>2.ಪರಿಹಾರ ಬೋಧನೆ<br>3.ಸಾಫಲ್ಯ ಪರೀಕ್ಷೆ | | | | |
| | | 1.ಶಬರಿ(ಪು.ತಿ.ನ) | 1.ಕವಿ ಪರಿಚಯ<br>2.ಶಬರಿ ಗೀತ ನಾಟಕದ ಪೂರ್ವ ಕಥೆ<br>3.ರಾಮನಿಗಾಗಿ ಕಾದಿರುವ ಶಬರಿ<br>4.ರಾಮಲಕ್ಷ್ಮಣರ ಶಬರಿಯ ಹುಡುಕಾಟ<br>5.ರಾಮನ ಸ್ವಾಗತಕ್ಕೆ ಶಬರಿ ಸಿದ್ದತೆಗಳು<br>6.ಶಬರಿಯ ಉಪಚಾರದ ವರ್ಣನೆ<br>7.ಹಿಂಗಿದ ಶಬರಿಯ ಚಿಂತೆ-ಮುಕ್ತಿ<br>8.ಅಭ್ಯಾಸ ಚಟುವಟಿಕೆ | | | | |

| | | | | | | | |
|---|---|---|---|---|---|---|---|
| ಜುಲೈ | | 2.ಎಮ್ಮನುಡಿಗೇಳ್ (ಪಂಪ) | 1.ಪಂಪಕವಿಯ ಪರಿಚಯ<br>2.ಪದ್ಯದ ಪೂರ್ವಕತೆ<br>3.ತಂದೆ-ತಾಯಿಯರ ಪಾದಕ್ಕೆರಿಗಿದ ದುರ್ಯೋಧನ<br>4.ಧೃತರಾಷ್ಟ್ರನಿಂದ ಸಂಧಿಯ ಪ್ರಸ್ತಾಪ<br>5.ಧೃತರಾಷ್ಟ್ರನ ಹಂಬಲದ ನುಡಿಗಳು<br>6.ಗಾಂಧಾರಿಯ ಹಿತವಚನ<br>7.ಸೈದ್ಧಾಂತಿಕ ಭಾಷಾಬ್ಯಾಸ ಚಟುವಟಿಕೆ ಛಂದಸ್ಸು, ವೃತ್ತಗಳು<br>8.ಪ್ರಾಯೋಗಿಕ ಚಟುವಟಿಕೆ | | | | |
| | | 3.ಅಮೆರಿಕಾದಲ್ಲಿ ಗೊರೂರು(ಪ್ರವಾಸ ಕಥನ) ಗೊ.ರಾ.ಆ | 1.ಲೇಖಕರ ಪರಿಚಯ<br>2.ವಿದ್ಯುತ್ ಒಲೆಯಿಂದಾದ ಗಡಿಬಿಡಿ<br>3.ಗೊರೂರ ಶಾಲೆಯ ಬೇಟಿ<br>4.ಅಮೆರಿಕಾ ಶಾಲೆಯ ವಿದ್ಯಾರ್ಥಿ ಮತ್ತು ಶಿಕ್ಷಕರುಗಳಿಗೆ ಖಾದಿಯ ಮಹತ್ವ<br>5.ವಿದ್ಯುತ್ ಒಲೆಯಿಂದಾದ ಅಪಾಯದ ಪರಿಹಾರ<br>6.ಸೈದ್ಧಾಂತಿಕ ಭಾಷಾಬ್ಯಾಸ (ಸಂಧಿಗಳು, ದ್ವಿರುಕ್ತಿಗಳು ಜೋಡುನುಡಿ)<br>7.ಅಭ್ಯಾಸ ಚಟುವಟಿಕೆ | | | | |

| | | | | | | | |
|---|---|---|---|---|---|---|---|
| | | 4.ಹಕ್ಕಿ ಹಾರುತಿದೆ ನೋಡಿದಿರಾ ?<br><br>1.ವಿಜ್ಞಾನ ಮತ್ತು ಸಮಾಜ (ಪ.ಪೋ) | 1.ಕವಿ–ಕಾವ್ಯ ಪರಿಚಯ<br>2.ಕಾಲದ ವಿಸ್ತಾರ<br>3.ಕಾಲದ ಗುರುತುಗಳು<br>4.ಕಾಲದ ವಿಶಾಲತೆ, ವ್ಯಾಪ್ತಿ<br>5.ಕಾಲದ ಸಾರ್ವಭೌಮತ್ವ<br>6.ಕಾಲದ ಹಾರೈಕೆ<br>7.ಸೈದ್ಧಾಂತಿಕ ಭಾಷಾಭ್ಯಾಸ ಅವ್ಯಯಗಳು<br>8.ಅಭ್ಯಾಸ ಚಟುವಟಿಕೆಗಳು | | | | |
| ಆಗಸ್ಟ್ | | 5.ಜೀವನದೃಷ್ಟಿ (ವಿ.ಕೃ.ಗೋಕಾಕ್) | 1.ಕವಿಕಾವ್ಯ ಪರಿಚಯ<br>2.ಅಂತರ್ಜೀವಿಯ ಅಂತರಂಗದ ಭವ್ಯತೆ<br>3.ಕಲೋಪಾಸಕನ ಕಲ್ಯಾಣ ಕಾರ್ಯಗಳು<br>4.ಸಾಧಕನ ಕರ್ತವ್ಯಪರತೆ<br>5.ಗೃಹಸ್ಥಾಶ್ರಮದ ಮಹತ್ವ<br>6.ಸಮರಸವೇ ಜೀವನ<br>7.ಸಹಾನುಭೂತಿಯ ಕಣ್ಣುಗಳು<br>8.ಸೈದ್ಧಾಂತಿಕ ಭಾಸಭ್ಯಾಸ (ಪತ್ರಲೇಖನ) | | | | |
| | | 6.ಹಲಗಲಿ ಬೇಡರು (ಜಾನಪದ ಲಾವಣಿ) | 1.ಜನಪದ ಸಾಹಿತ್ಯ ಪರಿಚಯ<br>2.ಬ್ಯಾಡರ ಹುಡುಗರ ವಚನ<br>3.ಹಲಗಲಿ ತಳದ ಮ್ಯಾಗ ಸಾಹೇಬನ ಸೈನ್ಯ<br>4.ಬ್ರಿಟೀಷ್ ಸೈನ್ಯದ ಮೇಲೆ ಬೇಡರ ಬೇಟೆ<br>5.ಬೆಂಕಿಯಾದ ಕಾರಸಾಹೇಬ | | | | |

| | | | | | | | |
|---|---|---|---|---|---|---|---|
| | | | 6.ಬ್ಯಾಡರ ಹುಡುಗರ ಕಸರತ್ತು<br>7.ಹಲಗಲಿ ಲೂಟಿ<br>8.ಸೈದ್ಧಾಂತಿಕ ಭಾಷಾಭ್ಯಾಸ<br>(ತತ್ಸಮ-ತದ್ಭವ)<br>9.ಅಭ್ಯಾಸ ಚಟುವಟಿಕೆ | | | | |
| ಸೆಪ್ಟಂಬರ್ | | 7.ಧರ್ಮಸಮದೃಷ್ಟಿ<br>(ಶಾಸನ ಸಂಗ್ರಹ) | 1.ವೀರಬುಕ್ಕರಾಯನ ಪರಿಚಯ<br>2.ರಾಮಾನುಜಾಚಾರ್ಯರರ ವರ್ಣನೆ<br>3.ಭಕ್ತರ ಬಿನ್ನಹ<br>4.ಧರ್ಮಸಭೆಗೆ ಆಹ್ವಾನ<br>5.ವೀರಬುಕ್ಕರಾಯನ ಧರ್ಮಸಾಮರಸ್ಯದ ಬೋಧನೆ<br>6.ಶಾಸನದ ಕಟ್ಟಳೆ<br>7.ಸೈದ್ಧಾಂತಿಕ ಭಾಷಾಭ್ಯಾಸ<br>(ಲೇಖನ ಚಿಹ್ನೆಗಳು)<br>8.ಅಭ್ಯಾಸ ಚಟುವಟಿಕೆ<br>(ಶಾಸನ ಸಂಗ್ರಹ) | | | | |
| | | 8.ವಚನ ಸೌರಭ<br>(ಜೇಡರ ದಾಸಿಮಯ್ಯ)<br>(ಬಸವಣ್ಣ) | 1.ವಚನ ಸಾಹಿತ್ಯ ಹಾಗೂ ವಚನಕಾರರ ಪರಿಚಯ<br>(ಜೇಡರ ದಾಸಿಮಯ್ಯ,ಬಸವಣ್ಣ)<br>2.ಸತಿಪತಿಗಳ ಭಕ್ತಿ ನಿಷ್ಟೆಯುಳ್ಳ ಭಕ್ತ<br>3.ಬೆಂದಮನ ಮರ್ಕಟ<br>4.ಮಾನವರ ಸ್ವಭಾವ<br>5.ಮನದೊಳಗಿನ ವಿಷಯ | | | | |

| | | | | | | | |
|---|---|---|---|---|---|---|---|
| | | 2.ನಾಮಫಲಕ<br>(ಪ.ಪೋ) | 6.ಲಿಂಗಮೆಚ್ಚಿದ ಮಾತು<br>7.ಸೈದ್ಧಾಂತಿಕ ಭಾಷಾಭ್ಯಾಷ<br>(ಅಲಂಕಾರಗಳು)<br>8.ಅಭ್ಯಾಸ ಚಟುವಟಿಕೆ<br>ವಚನಗಳ ಸಂಗ್ರಹ | | | | |
| | | 9.ಭಾಗ್ಯಶಿಲ್ಪಿಸರ್.ಎಂ.<br>ವಿಶ್ವೇಶ್ವರಯ್ಯ<br>ಡಿ.ಎಸ್.ಜಯಪ್ಪಗೌಡ | 1.ಕವಿ–ಕಾವ್ಯ ಪರಿಚಯ<br>2.ನೆಹರುರವರ ಅಭಿಮಾನದ ನುಡಿಗಳು<br>3.ಸರ್.ಎಂ.ವಿ ರವರ ಬಾಲ್ಯಜೀವನ<br>4.ಸರ್.ಎಂ.ವಿ ರವರ ಶಿಕ್ಷಣ<br>5.ಮುಂಬೈ ಮತ್ತು ಪೂನಾ ನಗರಗಳಲ್ಲಿ ಸರ್.ಎಂ.ವಿರವರ<br>ಸೇವೆ<br>6.ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರ್ ಆಗಿ<br>ಸರ್.ಎಂ.ವಿ ರವರ ಸೇವೆ<br>7.ದಿವಾನರಾದ ಸರ್.ಎಂ.ವಿರವರು<br>8.ಸರ್.ಎಂ.ವಿರವರ ದಿವಾನರಾಗಿ ಸಾಧನೆಗಳು<br>9.ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವ<br>10.ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ<br>ಸರ್.ಎಂ.ವಿ<br>11.ಸೈದ್ಧಾಂತಿಕ ಭಾಷಾಭ್ಯಾಸ<br>(ಸಮಾಸಗಳು)<br>12.ಅಭ್ಯಾಸ ಚಟುವಟಿಕೆ<br>(ಸಾಧಕರ ಚಿತ್ರ ಸಂಗ್ರಹ) | | | | |

| | | | | | | | |
|---|---|---|---|---|---|---|---|
| ನವೆಂಬರ್ | | 10.ಸಂಕಲ್ಪ ಗೀತೆ<br>ಜಿ.ಎಸ್.ಶಿವರುದ್ರಪ್ಪ | 1.ಕವಿ ಶಿವರುದ್ರಪ್ಪನವರ ಪರಿಚಯ<br>2.ಪ್ರೀತಿಯ ಹಣತೆ ಹಚ್ಚಿ ಜೀವನ ಮುನ್ನಡೆಸುವುದು<br>3.ಮುಂಗಾರಿನ ಮಳೆ ಮತು ವಸಂತ<br>4.ಹೊಸಭರವಸೆಗಳ ಸೇತುವೆ<br>5.ಹೊಸ ಬಾಳಿನ ಹೊಸ ಕನಸನು ಬಿತ್ತೋಣ<br>6.ಸೈದ್ಧಾಂತಿಕ ಭಾಷಾಭ್ಯಾಸ<br>ಕ್ರಿಯಾಪದಗಳು<br>ವಿಭಕ್ತಿ ಪ್ರತ್ಯಯಗಳು<br>7.ಅಭ್ಯಾಸ ಚಟುವಟಿಕೆ<br><br>ಕಂಠಪಾಠ(ನಿಗದಿತ ಪದ್ಯಭಾಗ) | | | | |
| ಡಿಸೆಂಬರ್ | | 11.ಎದೆಗೆ ಬಿದ್ದ ಅಕ್ಷರ (ದೇವನೂರ ಮಹದೇವ) | 1.ಕವಿ ದೇವನೂರ ಮಹಾದೇವರವರ ಪರಿಚಯ<br>2.ಮನೆಮಂಚಮ್ಮನ ಕತೆ<br>3.ನನ್ನ ದೇವರು<br>4.ವಚನ ಧರ್ಮ<br>5.ಸತ್ಯ ಸಮಾನತೆ–ಆರ್ತತೆ<br>6.ಪೈರಸಂಶೋಧನ ಸತ್ಯ<br>7.ಬುದ್ಧನ ಕಾರುಣ್ಯ<br>8.ಸೈಧ್ಧಾಂತಿ ಭಾಷಾಭ್ಯಾಷ<br>ತದ್ಧಿತಾಂತಗಳು | | | | |

| | | | | | | | |
|---|---|---|---|---|---|---|---|
| | | 12.ಕೌರವೇಂದ್ರನ ಕೊಂದೆ ನೀನು (ಕುಮಾರವ್ಯಾಸ)<br><br><br><br><br><br><br><br><br><br><br><br><br>3.ಉದಾತ್ತ ಚಿಂತನೆಗಳು (ಪ.ಪೋ) | 1.ಕುಮಾರವ್ಯಾಸನ ಪರಿಚಯ<br>2.ಪೂರ್ವಕತೆ<br>3.ಕರ್ಣನನ್ನು ಬರಸೆಳೆದ ಕೃಷ್ಣ<br>4.ರವಿಸುತನ ಕಿವಿಯಲಿ ಉಭಯ<br>5.ಭಿತ್ತಿದ ದಾನವಸೂದನ<br>6.ಮಂತ್ರಮಹಿಮೆ<br>7.ಕರ್ಣನಿಗೆ ರಾಜ್ಯದ ಆಸೆ ತೋರಿಸಿದ ಮುರಾರಿ<br>8.ಕರ್ಣನ ಧರ್ಮಸಂಕಟ<br>9.ಕೌರವೇಂದ್ರನ ಕೊಂದೆ ನೀನು<br>10.ವೀರರೈವರನು ನೋಹಿಸಿನು<br>11.ಸೈದ್ಧಾಂತಿಕ ಭಾಷಾಭ್ಯಾಸ<br>ಗಣಗಳು,ಷಟ್ಪದಿಗಳು<br>ರೂಪಾಕಾಲಂಕಾರ<br>12.ಅಭ್ಯಾಸ ಚಟುವಟಿಕೆ<br>ಪದ್ಯ ಕಂಠಪಾಠ | | | | |
| ಜನವರಿ | | 13.ವೃಕ್ಷಸಾಕ್ಷಿ | 1.ದುರ್ಗಸಿಂಹನ ಪರಿಚಯ<br>2.ಹೊನ್ನ ಕದ್ದ ದುಷ್ಟಬುದ್ಧಿ<br>3.ವೃಕ್ಷಸಾಕ್ಷಿ ಕೇಳುವುದು<br>4.ಪ್ರೇಮಮತಿಯ ಸುಳ್ಳು ನುಡಿ<br>5.ಧರ್ಮಬುಧ್ಧಿಯ ಸಾಕ್ಷ್ಯತಂತ್ರ<br>6.ಸೈದ್ಧಾಂತಿಕ ಭಾಷಾಭ್ಯಾಸ<br>ಛಂದಸ್ಸು ವೃತ್ತಗಳು,ಕಂದಪದ್ಯ | | | | |

| | | | | | | | |
|---|---|---|---|---|---|---|---|
| | | 14.ವೀರಲವ<br><br><br><br><br><br>4.ಪಾರಿವಾಳ<br>(ಪ.ಪೋ) | 1.ಲಕ್ಷ್ಮೀಶ ಕವಿ ಪರಿಚಯ<br>2.ಪೂರ್ವಕತೆ<br>3.ಆಶ್ರಮ ಹೊಕ್ಕಿದ ರಾಮನ ಯಜ್ಞಾಶ್ವ<br>4.ಯಜ್ಞಾಶ್ವ ಹಣೆಯಲ್ಲಿನ ಪಟ್ಟದ ಲಿಖಿತನೋದಿದ ಲವ<br>5.ಲವ–ಮುನಿಸುತರ ಸಂವಾದ<br>6.ಸೈದ್ಧಾಂತಿಕ ಭಾಷಾಭ್ಯಾಸ<br>ರಗಳೆ,ವಾರ್ಧಕ ಷಟ್ಪದಿ | | | | |
| ಫೆಬ್ರವರಿ<br>ಮಾರ್ಚ್ | | 15.ವ್ಯಾಘ್ರಗೀತೆ | 1.ಕವಿ–ಕಾವ್ಯ ಪರಿಚಯ<br>2.ಭರತ ಭೂಮಿಯ ಹುಲಿಗಳು<br>3.ಶಾನಭೋಗರ ಇರಸಾಲಿ<br>4.ಶಾನಭೋಗರ ಬೇಟೆಗೆ ಹುಲಿಯ ತಂತ್ರ<br>5.ಶಾನಭೋಗರ ಪ್ರತಿ ತಂತ್ರ<br>6.ಶಾನಭೋಗರ ಉಳಿವು<br>7.ಹುಲಿಯ ಧರ್ಮಶ್ರದ್ಧೆಯ ನೆನೆಹು<br>8.ಸೈದ್ಧಾಂತಿಕ ಭಾಷಾಭ್ಯಾಸ<br>ನಾಮಪದ,ಕೃದಂತಗಳು | | | | |
| | | 16.ಸಾರ್ಥಕತೆ | 1.ಲೇಖಕಿಯರ ಪರಿಚಯ<br>2.ಕವನಗಳದ ಆಶಯ<br>3.ಸಂಕಟಕೆ ಗಡಿಯಿಲ್ಲ<br>(ಮಾನವ ಮಣ್ಣಿನ ಮಾಲಿಕ, ಗಡಿ–ಕಾದಾಟಸಂಕಟ)<br>4.ನನ್ನಾಸೆ ( ಬತ್ತಿ–ಬೆಳಕು, ಮರವಾಗು, | | | | |

| | | | | | | | |
|---|---|---|---|---|---|---|---|
| | | 5.ಜನಪದ ಒಗಟುಗಳು (ಪ ಪೋ) | ಬತ್ತದವರತೆ,ಜೋಗುಳ, ವಾಗ್ದೇವಿಗ್ರಂಥ, ಊರುಗೋಲು<br>5.ಸೈದ್ಧಾಂತಿಕ ಭಾಷಾಭ್ಯಾಸ<br>ಅಲಂಕಾರ<br>ಅರ್ಥಾಂತರನ್ಯಾಸಾಲಂಕಾರ<br>ಇತರೆ ವ್ಯಾಕರಣಾಂಶಗಳು | | | | |

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಶಬರಿ (ಗೀತ ನಾಟಕ) ಪು.ತಿ.ನ**

**ಬೋಧನೆಯ ಉದ್ದೇಶಗಳು** :1.ವಿದ್ಯಾರ್ಥಿಗಳಲ್ಲಿ ರಸಭಾವನೆಗಳ ಬೆಳವಣಿಗೆ,ಅಭಿನಯಕಲೆ,ಪಾತ್ರಗಳಿಗೆ ಜೀವಂತಿಕೆ ತುಂಬುವ ಕಲೆ ಬೆಳೆಸುವುದು.
2.ಸಾಮಾಜಿಕಪ್ರಜ್ಞೆ, ದೇಶಪ್ರೇಮ,ಸಹನಾಗುಣಗಳು,ಅತಿಥಿ ಸತ್ಕಾರ, ಮುಂತಾದ ಮೌಲ್ಯಗಳನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು** : ಪು.ತಿ.ನ ರವರ ಭಾವಚಿತ್ರ, ರಾಮಾಯಣದ ಪಾತ್ರ ಚಿತ್ರಗಳು, ಶಬರಿ ರಾಮನ ಸತ್ಕಾರದ ಕಾಲ್ಪನಿಕ ಚಿತ್ರ, ಪದಗಳ ಅರ್ಥಗಳು ಮುಂತಾದವು.

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | ಕವಿ ಪರಿಚಯ<br>ಶಬರಿ ಗೀತ ನಾಟಕದ ಪೂರ್ವ ಕಥೆ<br><br>ರಾಮನಿಗಾಗಿ ಕಾದಿರುವ ಶಬರಿ<br><br>ರಾಮಲಕ್ಷ್ಮಣರ ಶಬರಿಯ ಹುಡುಕಾಟ<br>ರಾಮನ ಸ್ವಾಗತಕ್ಕೆ ಶಬರಿ ಸಿದ್ಧತೆಗಳು | <u>ಪ್ರೇರಣಾ ಚಟುವಟಿಕೆ</u><br>ರಾಮಾಯಣದಲ್ಲಿ ಬರುವ ಪಾತ್ರಗಳನ್ನು ಪಟ್ಟಿ ಮಾಡಿಸಿ, ಕಪ್ಪುಹಲಗೆ ಮೇಲೆ ಬರೆಸುವುದು, ಓದಿಸುವುದು. ರಾಮ ಲಕ್ಷ್ಮಣ, ಸೀತೆ, ಶಬರಿ ಪಾತ್ರಗಳ ಬಗ್ಗೆ ವಿದ್ಯಾರ್ಥಿಗಳಿಂದ ಹೇಳಿಸುವುದು/ಹೇಳುವುದು. ಕವಿ ಪರಿಚಯದೊಂದಿಗೆ ಪಾಠ ಆರಂಭಿಸುವುದು.<br><u>ಪಾಠ ಪ್ರಕ್ರಿಯೆಗಳು</u><br>ಪಾಠವನ್ನು(ಗೀತನಾಟಕವನ್ನು) | ವೀಕ್ಷಣೆ | ಗುಂಪು ಚರ್ಚೆ | 1.ಶ್ರೀರಾಮನ ತಂದೆಯ ಹೆಸರೇನು?<br><br>2. ರಾಮನ ದರ್ಶನಕ್ಕಾಗಿ ಕಾದಿರುವರು ಯಾರು ?<br><br>3. ಶಬರಿಯನ್ನು ಹುಡುಕುತ್ತ ರಾಮ-ಲಕ್ಷ್ಮಣರು ಎಲ್ಲಿಗೆ ಬಂದರು? |

| | | | | | |
|---|---|---|---|---|---|
| | ಶಬರಿಯ ಉಪಚಾರದ ವರ್ಣನೆ<br><br>ಹಿಂಗಿದ ಶಬರಿಯ ಚಿಂತೆ–ಮುಕ್ತಿ ಅಭ್ಯಾಸ ಚಟುವಟಿಕೆ | ಪಾತ್ರಗಳಿಗನುಗುಣವಾಗಿ ಗಟ್ಟಿಯಾಗಿ ಅಭಿನಯ ರೂಪದಲ್ಲಿ ಓದುವುದು. ವಿದ್ಯಾರ್ಥಿಗಳಿಗೆ ಪಾತ್ರ ಹಂಚಿ ಓದಿಸುವುದು. ಮೌನ ಓದು ನೀಡುವುದು.<br>ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಶಬರಿ ನಾಟಕವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು.<br>ಪ್ರೇರಣಾ ಅಭ್ಯಾಸ ಚಟುವಟಿಕೆಗಳನ್ನು ಪ್ರಶ್ನೋತ್ತರಗಳನ್ನು ಚರ್ಚಿಸುವುದು<br>ರಾಮ,ಲಕ್ಷ್ಮಣ, ಸೀತೆ, ಶಬರಿ ಇವರಲ್ಲಿ ಒಬ್ಬರ ಚಿತ್ರ(ಕಾಲ್ಪನಿಕ) ಸಂಗ್ರಹಿಸಿ ಪಾತ್ರ ಪರಿಚಯಿಸಿ | ಪ್ರಶ್ನೋತ್ತರ<br><br>ಅವಲೋಕನ | ಪ್ರಶ್ನೆಕೋಶ<br><br>ತಪಶೀಲುಪಟ್ಟಿ | 4. ಶಬರಿ ರಾಮನದರ್ಶನಕ್ಕಾಗಿ ಹೇಗೆ ಸಿದ್ಧತೆ ಮಾಡಿ ಕೊಂಡಿದ್ದಳು?<br><br>5. ರಾಮನಿಗೆ ಶಬರಿ ಯಾವ ರೀತಿ ಉತ್ತರಿಸಿದಳು?<br><br>6. ಶಬರಿ ಕೊನೆಯ ಆಸೆ ಯಾವುದಾಗಿತ್ತು?? |



**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ಎಮ್ಮನುಡಿಗೇಳ್ (ಪಂಪ)**

**ಬೋಧನೆಯ ಉದ್ದೇಶಗಳು**: 1.ಹಳಗನ್ನಡ ಕಾವ್ಯವನ್ನು ಸ್ಪಷ್ಟವಾಗಿ ಬಿಡಿಸಿ ಓದುವ, ಅರ್ಥೈಸಿಕೊಳ್ಳುವ ಸಾಮಾರ್ಥ್ಯ ಬೆಳೆಸುವುದು.
2.ಯುದ್ಧ, ದ್ವೇಷ,ಅಸೂಯೆ, ಕೀರ್ತಿಯ ಬೆನ್ನುಹಿಡಿದು ಹೋದರೆ ಆಗುವ ಪರಿಣಾಮಗಳನ್ನು ಅರಿಯುವುದು.
3.ಸಹಬಾಳ್ವೆ, ಆತ್ಮಗೌರವ,ಶಾಂತಿ ಹಿರಿಯರಿಗೆ ಗೌರವ ಮುಂತಾದ ಮೌಲ್ಯಗಳನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು** : ಪಂಪಕವಿಯ ಭಾವಚಿತ್ರ ,ಕವಿ ಕಾವ್ಯ ಪರಿಚಯದ ಚಾರ್ಟ್ ,ಪದಗಳ ಅರ್ಥಗಳ ಚಾರ್ಟ್

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | **ಪಂಪಕವಿಯ ಪರಿಚಯ**<br><br>ಪದ್ಯದ ಪೂರ್ವಕತೆ<br><br><br><br>ತಂದೆ-ತಾಯಿಯರ ಪಾದಕ್ಕೆರಿಗಿದ ದುರ್ಯೋಧನ<br>ಧೃತರಾಷ್ಟ್ರನಿಂದ ಸರದಿಯ ಪ್ರಸ್ತಾಪ<br>ದೃತರಾಷ್ಟ್ರನ ಹಂಬಲದ ನುಡಿಗಳು<br>ಗಾಂಧಾರಿಯ ಹಿತವಚನ | **<u>ಪ್ರೇರಣಾ ಚಟುವಟಿಕೆ</u>**<br>ಹಳಗನ್ನಡ ಕವಿಗಳನ್ನು ಪಟ್ಟಿಮಾಡಿಸುವುದು. ಆಮೂಲಕ ಪಂಪಕವಿಯ ಪರಿಚಯಿಸುವುದು.<br>ಮಹಾಭಾರತದಲ್ಲಿ ಬರುವ ಪಾತ್ರಗಳನ್ನು ಪಟ್ಟಿಮಾಡಿಸಿ, ಬರೆಸಿ ಅವರಿಗೆ ಗೊತ್ತಿರುವ ಪಾತ್ರಗಳ ಬಗ್ಗೆ ಪರಿಚಯಿಸುವಂತೆ ಪ್ರೇರೇಪಿಸುವುದು.<br><u>ಪಾಠ ಪ್ರಕ್ರಿಯೆಗಳು</u><br>ಪೂರ್ವಕತೆಯನ್ನು ಹೇಳಿದ ನಂತರ ಪದ್ಯಭಾಗವನ್ನು ಗಮಕದಲ್ಲಿ ರಾಗವಾಗಿ ಗಟ್ಟಿಯಾಗಿ ಹಾಡುವುದು. ಪದಬಿಡಿಸಿ ಓದುವುದ, ವಿದ್ಯಾರ್ಥಿಗಳಿಂದಗಟ್ಟಿಯಾಗಿ | <br><br>ಅವಲೋಕನ<br><br><br>ಬರವಣಿಗೆ<br><br>ಬರವಣಿಗೆ<br>ಗುಂಪು ಮೌಲ್ಯಮಾಪನ | <br><br>ಪ್ರಶ್ನೆಗಳು<br><br><br>ಕಪ್ಪುಹಲಗೆ<br><br>ಪ್ರಶ್ನೆಕೋಶ<br>ನಿಯೋಜಿತ ಕಾರ್ಯ | 1.ಆದಿಕವಿ ಎಂದು ಯಾರನ್ನು ಕರೆಯಲಾಗುತ್ತದೆ?<br><br>2. ಪಂಪನ ಕೃತಿಗಳು ಯಾವುವು?<br>3. ದುರ್ಯೋಧನನ ತಂದೆ-ತಾಯಿಗಳು ಯಾರು?<br>4. ಪಾಂಡುನಂದನರನ್ನು ಹೆಸರಿಸಿ?<br>5. ಘಟಸಂಭೂತ ಎಂದರೆ ಯಾರು?<br>6. ಗಾಂಡೀವಿ ಎಂದು ಯಾರಿಗೆ |

| | | | | | |
|---|---|---|---|---|---|
| | ಸೈದ್ಧಾಂತಿಕ ಭಾಷಾಬ್ಯಾಸ ಚಟುವಟಿಕೆ<br>ಛಂದಸ್ಸು, ವೃತ್ತಗಳು<br>ಪ್ರಾಯೋಗಿಕ ಚಟುವಟಿಕೆ | ಓದಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು. ಅಭಿನಯದ ಮೂಲಕ ಅರ್ಥೈಸಲು ಪ್ರಯತ್ನಿಸುವುದು. ವಿದ್ಯಾರ್ಥಿಗಳನ್ನು ಅಭಿನಯಿಸಲು ಪ್ರೇರೇಪಿಸುವುದು.<br><br>ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು ಹೇಳಿಸುವುದು, , ಭಾಷಾಭ್ಯಾಸ ಚಟುವಟಿಕೆ ಪ್ರಶ್ನೋತ್ತರಗಳ ಚರ್ಚೆ | ವೀಕ್ಷಣೆ | ಪಾತ್ರಗಳ ಅಭಿನಯ | ಕರೆಯಲಾಗುತ್ತದೆ?<br>7. ದೃತರಾಷ್ಟ್ರ ದುರ್ಯೋಧನ ನನ್ನು ಯಾರಿಗೆಹೋಲಿಸಿದನು?<br>8.ದುಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ಅಮೆರಿಕಾದಲ್ಲಿ ಗೊರೂರು(ಪ್ರವಾಸ ಕಥನ) ಗೊ.ರಾ.ಆ**

**ಬೋಧನೆಯ ಉದ್ದೇಶಗಳು:** 1.ಸ್ಥಳೀಯ ದೇಶೀಯ ಮತ್ತು ಅಂತರಾಷ್ಟ್ರೀಯ ಪ್ರವಾಸ ಸಾಹಿತ್ಯ ಓದುವ ರಚಿಸುವ ಹವ್ಯಾಸ ಬೆಳೆಸುವುದು.
2. ಆಧುನಿಕ ಯುಗದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಅರಿವಿನ ಮಹತ್ವನ್ನು ತಿಳಿಸುವುದು.
3.ಸ್ವದೇಶಿ ವಸ್ತುಗಳ ಬಗ್ಗೆ ಅರಿವನ್ನುಂಟುಮಾಡುವುದು.

**ಕಲಿಕಾ ಸಾಮಗ್ರಿಗಳು** : ಗೊರೂರ ಭಾವಚಿತ್ರ ,ಪ್ರವಾಸಕಥನಕಗಳ ಪುಸ್ತಕಗಳು,ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳು,ಕವಿಕಾವ್ಯಪರಿಚಯುದ ಚಾರ್ಟ್

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | **ಲೇಖಕರ ಪರಿಚಯ**<br><br>ವಿದ್ಯುತ್ ಒಲೆಯಿಂದಾದ ಗಡಿಬಿಡಿ<br>ಗೊರೂರ ಶಾಲೆಯ ಬೇಟಿ<br><br>ಅಮೆರಿಕಾ ಶಾಲೆಯ ವಿದ್ಯಾರ್ಥಿ ಮತ್ತು ಶಿಕ್ಷಕರುಗಳಿಗೆ ಖಾದಿಯ ಮಹತ್ವ<br><br>ವಿದ್ಯುತ್ ಒಲೆಯಿಂದಾದ ಅಪಾಯದ ಪರಿಹಾರ | **ಪ್ರೇರಣಾ ಚಟುವಟಿಕೆ**<br>ದೇಶಿಯ ಹಾಗೂ ವಿದೇಶಿಯ ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟ ತೋರಿಸಿ ಅವುಗಳು ಇರುವ ಸ್ಥಳಗಳನ್ನು ಹೇಳಿಸುವುದು.<br>ಕಪ್ಪುಹಲಗೆ ಮೇಲೆ ಬರೆಸುವುದು,, ಓದಿಸುವುದು.<br>ತಾವು ಕೈಗೊಂಡಿದ್ದ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ವಾಕ್ಯಗಳನ್ನು ಬರೆದು ಓದುವಂತೆ ಪ್ರೇರೇಪಿಸುವುದು.<br>**ಪಾಠ ಪ್ರಕ್ರಿಯೆಗಳು** | ವೀಕ್ಷಣೆ<br><br><br><br>ಬರವಣಿಗೆ<br><br><br><br><br>ಪ್ರಶ್ನೋತ್ತರ | ಪ್ರಶ್ನಕೋಶ<br><br><br><br><br>ದರ್ಜಾಮಾಪನ | 1.ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ವಿಷಯಗಳು ಯಾವುವು?<br>2. ಗೊರೂರರಿಗೆ ಉಂಟಾದ ಸಮಸ್ಯೆ ಯಾವುದು?<br>3. ರೊಯ್ ಎಂಬ ಶಬ್ದ ಎಲ್ಲಿಂದ ಬರುತ್ತಿತ್ತು?<br>4. ಗೊರೂರರು ವಿದ್ಯುತ್ ಒಲೆಯ ಅಪಾಯವನ್ನು ನಿವಾರಿಸಿಕೊಳ್ಳಲು ಏನು ಮಾಡಿದರು? ಮಾಡಿಕೊಂಡಿದ್ದಳು? |

| | | | | | |
|---|---|---|---|---|---|
| | ಸೈದ್ಧಾಂತಿಕ ಭಾಷಾಭ್ಯಾಸ (ಸಂಧಿಗಳು, ದ್ವಿರುಕ್ತಿಗಳು ಜೋಡುನುಡಿ)<br>ಅಭ್ಯಾಸ ಚಟುವಟಿಕೆ | ಕವಿ ಪರಿಚಯದೊಂದಿಗೆ ಪಾಠವನ್ನು ಗಟ್ಟಿಯಾಗಿ ವಾಚಿಸುವುದು.<br>ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು ಮಾಡಿಸುವುದು.<br>ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುತ್ತಾ ಸಂವಹನ ನಡೆಸುವುದು.<br>ಚರ್ಚಾಸ್ಪರ್ಧೆ ಏರ್ಪಡಿಸುವುದು.<br>"ವಿಜ್ಞಾನ-ತಂತ್ರಜ್ಞಾನದ ಅನುಕೂಲ-ಅನಾನುಕೂಲ | ವೀಕ್ಷಣೆ | ದರ್ಜಾಮಾಪನ | 5.ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು?<br>6. ಗೊರೂರರನ್ನು ನೋಡಿದ ವಿದ್ಯಾರ್ಥಿಗಳು ಅವರನ್ನು ಏನೆಂದು ಕರೆದರು?<br>7. ಗೊರೂರರು ಖಾದಿಯ ಮಹತ್ವವನ್ನು ಹೇಗೆ ತಿಳಿಸಿದರು?<br>8.ಒಲೆಯ ಅಪಾಯವನ್ನು ನಿವಾರಿಸಿದವರು ಯಾರು? |

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಹಕ್ಕಿ ಹಾರುತಿದೆ ನೋಡಿದಿರಾ ?**

**ಬೋಧನೆಯ ಉದ್ದೇಶಗಳು** :1.ತಾರ್ಕಿಕ ಪ್ರಜ್ಞೆ ಮತ್ತು ವಿಮರ್ಶಾತ್ಮಕ ಗುಣಗಳನ್ನು ಬೆಳೆಸುವುದು.
2.ಕಾಲದಗತಿಯನ್ನು ಹಕ್ಕಿಹಾರುವಿಕೆಗೆ ಹೇಗೆ ಸಮೀಕರಿಸಿದ್ದಾರೆಂಬುದನ್ನು ಅರ್ಥೈಸಿಕೊಳ್ಳುವುದು.
3.ಕಾಲದ ಮಹತ್ವನ್ನು ಅರಿಯುವುದು.

**ಕಲಿಕಾ ಸಾಮಗ್ರಿಗಳು** :ದ.ರಾ ಬೇಂದ್ರಯವರ ಭಾವಚಿತ್ರ, ಕವಿಕಾವ್ಯಪರಿಚಯದ ಚಾರ್ಟ್, ಭಾವಗೀತೆಯ ಧ್ವನಿಸುರಳಿ, 'ಗರಿ' ಕವನ ಸಂಕಲನ

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | **ಕವಿ–ಕಾವ್ಯ ಪರಿಚಯ**<br><br>ಕಾಲದ ವಿಸ್ತಾರ<br>ಕಾಲದ ಗುರುತುಗಳು<br><br>ಕಾಲದ ವಿಶಾಲತೆ, ವ್ಯಾಪ್ತಿ<br><br>ಕಾಲದ ಸಾರ್ವಭೌಮತ್ವ<br><br>ಕಾಲದ ಹಾರೈಕೆ | **ಪ್ರೇರಣಾ ಚಟುವಟಿಕೆ**<br>ಜಿ.ಎಸ್.ಶಿವರುದ್ರಪ್ಪ ನವರ 'ಎಲ್ಲೋ ಹುಡುಕಿದೆ ಇಲ್ಲದ ದೇವರ'ಭಾವ ಗೀತೆಯನ್ನು ಕೇಳಿಸುವುದು. ವಿದ್ಯಾರ್ಥಿಗಳಿಂದ ಭಾವಗೀತೆಯನ್ನು ಹಾಡಿಸಲು ಪ್ರೇರೇಪಿಸುವುದು. ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ತೋರಿಸುತ್ತ ಬೇಂದ್ರೆಯವರ ಪರಿಚಯ ಮಾಡಿಸುವುದು.<br>**ಪಾಠ ಪ್ರಕ್ರಿಯಗಳು**<br>ಭಾವಗೀತೆಯನ್ನು ರಾಗವಾಗಿ ಹಾಡುವುದು, ವಿದ್ಯಾರ್ಥಿಗಳಿಂದ | ವೀಕ್ಷಣೆ<br><br>ಪ್ರಶ್ನೋತ್ತರ<br><br>ಚರ್ಚೆ | ಚರ್ಚೆ<br><br>ಪ್ರಶ್ನಾಕೋಶ<br><br>ಪುಸ್ತಕಗಳು | 1.ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ್ತಿದೆ.?<br><br>2. ಹಕ್ಕಿ ಯಾವ ವೇಗದಲ್ಲಿ ಹಾರುತ್ತದೆ.?<br><br>3. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ.?<br><br>4. ಹಕ್ಕಿಯ ಕಣ್ಣುಗಳು ಯಾವುವು?<br><br>5. ಹಕ್ಕಿಯ ಯಾರ ನೆತ್ತಿಯನ್ನು |

| | | | | | |
|---|---|---|---|---|---|
| | ಸೈದ್ಧಾಂತಿಕ ಭಾಷಾಭ್ಯಾಸ<br><br>ಅವ್ಯಯಗಳು<br><br>ಅಭ್ಯಾಸ ಚಟುವಟಿಕೆಗಳು | ಸಾಮೂಹಿಕವಾಗಿ ಹಾಡಿಸುವುದು.<br>ಮೌನವಾಚನ ಮಾಡುವುದು<br>ಪ್ರಶ್ನೋತ್ತರ ವಿಧಾನದ ಮೂಲಕ<br>ಅರ್ಥೈಸುವುದು.<br><br>ನಿಗಧಿತ ಪದ್ಯಭಾಗವನ್ನು<br>ಕಂಠಪಾಠ ಮಾಡಿಸುವುದು.<br>ಹೇಳಿಸುವುದು, ಬರೆಸುವುದು,<br>ಭಾಷಾಭ್ಯಾಸ ಚಟುವಟಿಕೆ<br><br>ಪ್ರಶ್ನೋತ್ತರಗಳ ಚರ್ಚೆ | ಬರವಣಿಗೆ | ಪುಸ್ತಕಗಳು | ಕುಕ್ಕಿದೆ?<br>6. ಹಕ್ಕಿ ಯಾರನ್ನು ಹರಸಿದೆ?<br>7. ಹಕ್ಕಿಯು ಯಾವುದರ<br>ಸಂಕೇತವಾಗಿದೆ.? |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ಜೀವನ ದೃಷ್ಟಿ(ವಿ.ಕೃ.ಗೋಕಾಕ್)**

**ಬೋಧನೆಯ ಉದ್ದೇಶಗಳು :** 1.ಮಾನವ ಸಂಘಜೀವಿ ಎಂಬುದರ ಅರಿವು ಮೂಡಿಸುವುದು
2.ಸಹಜೀವನದ ಮಹತ್ವ ತಿಳಿಸುವುದು
3.ತಮ್ಮ ಸಾಧನೆಯಿಂದ ಸಮಾಜಕ್ಕೆ ಒಳಿತಾಗಬೇಕೆಂಬ ಸಮದೃಷ್ಟಿಯನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು :** ಕವಿ,ಕಾವ್ಯ ಪರಿಚಯದ ಚಾರ್ಟ್, ವಿ.ಕೃ.ಗೋಕಾಕ್‌ರ ಭಾವಚಿತ್ರ ಪ್ರಶ್ನಾವಳಿ ಕಾರ್ಡುಗಳು, ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡಿಗರ ಭಾವ ಚಿತ್ರಗಳು

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | ಕವಿಕಾವ್ಯ ಪರಿಚಯ<br><br><br>ಅಂತರ್ಜೀವಿಯ ಅಂತರಂಗದ ಭವ್ಯತೆ<br>ಕಲೋಪಾಸಕನ ಕಲ್ಯಾಣ ಕಾರ್ಯಗಳು<br><br>ಸಾಧಕನ ಕರ್ತವ್ಯಪರತೆ<br><br>ಗೃಹಸ್ಥಾಶ್ರಮದ ಮಹತ್ವ | **ಪ್ರೇರಣಾ ಚಟುವಟಿಕೆ:**<br>ಮಾನವ ಸಂಘಜೀವಿ ,ಸಹಜೀವನ ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುತ್ತ ಹಿಂದಿನ ಸಮಾಜಕ್ಕೂ ಇಂದಿನ ಸಮಾಜಕ್ಕೂ ಇರುವ ವ್ಯತ್ಯಾಸವನ್ನು ಚರ್ಚಿಸುವುದು.ಆ ಮೂಲಕ ಪ್ರಸ್ತುತ ಜೀವನದ ದೃಷ್ಟಿಕೋನಗಳು ಹೇಗಿರಬೇಕೆಂದು ಪರಿಚಯಿಸುದು.<br>**ಪಾಠ ಪ್ರಕ್ರಿಯೆಗಳು**<br>ಕವಿ ಪರಿಚಯದೊಂದಿಗೆ ಪಾಠವನ್ನು ಗಟ್ಟಿಯಾಗಿ ವಾಚಿಸುವುದು. | ಅವಲೋಕನ<br><br>ವೀಕ್ಷಣೆ<br><br>ಪ್ರಶ್ನೋತ್ತರ ಚರ್ಚೆ | ತಪಶೀಲು ಪಟ್ಟಿ<br><br>ಪ್ರಶ್ನಾಕೋಶ<br><br>ಪ್ರಶ್ನಾವಳಿ | 1) ಜ್ಞಾನಪೀಠ ಪ್ರಶಸ್ತಿ ಪಡೆದ ವಿ.ಕೃ.ಗೋಕಾಕ್‌ರ ಕಾವ್ಯ ಯಾವುದು ?<br>2) ಜೀವನ ದೃಷ್ಟಿ ಎಂಬ ಪಾಠವನ್ನು ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ ?<br>3) ಸಂಘಜೀವಿ ಎಂದರೇನು ?<br>4) ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ ?<br>5) ಅಂತರ್ಜೀವಿಯ ದೊಡ್ಡ ಸಮಸ್ಯೆ ಯಾವುದು ? |

| | | | | | |
|---|---|---|---|---|---|
| | ಸಮರಸವೇ ಜೀವನ<br><br>ಸಹಾನುಭೂತಿಯ ಕಣ್ಣುಗಳು<br><br>ಸೈದ್ಧಾಂತಿಕ ಭಾಸಭ್ಯಾಸ (ಪತ್ರಲೇಖನ) | ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು ಮಾಡಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುತ್ತಾ ಸಂವಹನ ನಡೆಸುವುದು ಅಂತರ್ಜೀವಿಯ ಮಹತ್ವ ಕಲೋಪಾಸಕನ ಕಲ್ಯಾಣ ಕಾರ್ಯಗಳು ಸಾಧಕನ ಕರ್ತವ್ಯಪರತೆ ಗೃಹಸ್ಥಾಶ್ರಮದ ಮಹತ್ವ ಸಮರಸವೇ ಜೀವನ ಸಹಾನುಭೂತಿಯ ಕಣ್ಣುಗಳು ಮುಂತಾದವುಗಳ ಬಗ್ಗೆ ಚರ್ಚಿಸುವುದು | ಪ್ರಶ್ನೋತ್ತರ<br><br><br><br><br>ಬರವಣಿಗೆ | ಕಾರ್ಡು<br><br><br><br><br>ಶಬ್ಧಕೋಶ | 6) ಸಮಾಜದ ಕಲ್ಯಾಣವನ್ನು ಪೋಷಿಸುವ ಶಕ್ತಿ ಯಾರಲ್ಲಿ ಇರುತ್ತದೆ ?<br>7) ಸಾಧಕನ ಕರ್ತವ್ಯವೇನು ?<br>8) ಗೃಹಸ್ಥಾಶ್ರಮದ ಮಹತ್ವವನ್ನು ತಿಳಿಸಿದವರು ಯಾರು ? |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ಹಲಗಲಿ ಬೇಡರು (ಜಾನಪದ ಲಾವಣಿ)**

**ಬೋಧನೆಯ ಉದ್ದೇಶಗಳು** : 1.ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುವುದು
2.ದೇಶಭಕ್ತಿ,ತ್ಯಾಗ,ಬಲಿದಾನ,ಪರೋಪಕಾರ ಮುಂತಾದ ಗುಣಗಳನ್ನು ಬೆಳೆಸುವುದು.
3.ಅನಕ್ಷರಸ್ಥರಲ್ಲಿದ್ದ ಅಪ್ರತಿಮಾ ದೇಶಪ್ರೇಮವನ್ನು ಪ್ರಶಂಸಿಸುವುದು.

**ಕಲಿಕಾ ಸಾಮಗ್ರಿಗಳು** : ಜನಪದ ಗೀತೆ,ಜನಪದ ಲಾವಣಿಗಳ ಪುಸ್ತಕಗಳು , ಜನಪದ ಗೀತೆಗಳ ಆಡಿಯೋ ಆಡಿಯೋಪ್ಲೇಯರ್

| **ಅವಧಿ** | **ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
|---|---|---|---|---|---|
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ** |
| | **ಜನಪದ ಸಾಹಿತ್ಯ ಪರಿಚಯ**<br><br>ಬ್ಯಾಡರ ಹುಡುಗರ ವಚನ ಹಲಗಲಿ ತಳದ ಮ್ಯಾಗ ಸಾಹೇಬನ ಸೈನ್ಯ<br><br>ಬ್ರಿಟೀಷ್ ಸೈನ್ಯದ ಮೇಲೆ ಬೇಡರ ಬೇಟೆ<br><br>ಬೆಂಕಿಯಾದ ಕಾರಸಾಹೇಬ<br><br>ಬ್ಯಾಡರ ಹುಡುಗರ | **ಪ್ರೇರಣಾ ಚಟುವಟಿಕೆ:**<br>ಜನಪದ ಗೀತೆ,ಜನಪದ ತ್ರಿಪದಿಗಳನ್ನು ಹಾಡುವುದು,ವಿದ್ಯಾರ್ಥಿಗಳಿಗೆ ಗೊತ್ತಿರುವ ಜನಪದ ಗೀತೆ,ಜನಪದ ತ್ರಿಪದಿಗಳನ್ನು ಹಾಡಿಸುವುದು ಪುಸ್ತಕದಲ್ಲಿರುವ ಜನಪದ ಗೀತೆ, ಜನಪದ ತ್ರಿಪದಿಗಳನ್ನು ಲಾವಣಿಗಳನ್ನು ಹಾಡಿಸುವುದು ಆ ಮೂಲಕ ಜನಪದ ಸಾಹಿತ್ಯದ ಪರಿಚಯ<br>**ಪಾಠ ಪ್ರಕ್ರಿಯೆಗಳು**<br>ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಹಿನ್ನಲೆಯನ್ನು ಹೇಳುವುದು,ಅದರಲ್ಲಿ ಹಲಗಲಿ ದಂಗೆಯನ್ನು ಕುರಿತು ವಿವರಿಸುವುದು, ಆ ವಿಷಯವನ್ನು | ಹಾಡಿಸುವುದು<br><br>ಆಡಿಯೋ ಕೇಳಿಸುದು<br><br>ಪ್ರಶ್ನೋತ್ತರ | ಜನಪದ ಗೀತೆಗಳ ಪುಸ್ತಕ ಜನಪದ ಲಾವಣಿ ಗಳಪುಸ್ತಕ<br><br>ಆಡಿಯೋ ಪೇಯರ್<br><br>ಪ್ರಶ್ನಾಕೋಶ | 1) ಜನಪದ ಸಾಹಿತ್ಯ ಎಂದರೇನು<br>2) ಲಾವಣಿಗಳನ್ನು ವೀರಗೀತೆ ಗಳೆಂದು ಏಕೆ ಕರೆಯಲಾಗುತ್ತೆ<br>3) ಹಲಗಲಿ ದಂಗೆಗೆ ಕಾರಣವೇನು ?<br>4) ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಯಾವಾಗ ನಡೆಯಿತು<br><br>5) ಹಲಹಲಿ ಲಾವಣಿಗೆ ಕಾರಣರಾದ ಹುಡುಗರು |

| | | | | | |
|---|---|---|---|---|---|
| | ಕಸರತ್ತು<br><br>ಹಲಗಲಿ ಲೂಟಿ<br>ಸೈದ್ಧಾಂತಿಕ ಭಾಷಾಭ್ಯಾಸ<br>(ತತ್ಸಮ–ತದ್ಧವ)ಅಭ್ಯಾಸ<br>ಚಟುವಟಿಕೆ | ಒಳಗೊಂಡಿರುವ ಹಲಗಲಿ<br>ಲಾವಣಿಯನ್ನು ಪರಿಚಯಿಸುವುದು,<br>ಲಾವಣಿಯನ್ನು ರಾಗವಾಗಿ ಹಾಡುವುದು,<br>ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ<br>ಹಾಡಿಸುವುದು ಆ ಮೂಲಕ<br>ಲಾವಣಿಯನ್ನು ಪ್ರಶ್ನೋತ್ತರ ವಿಧಾನದ<br>ಮೂಲಕ ಅರ್ಥೈಸುವುದು<br>**ತತ್ಸಮ–ತದ್ಧವಗಳ ಪಟ್ಟಿ**<br>ತಯಾರಿಸಿ,ವಿದ್ಯಾರ್ಥಿಗಳಿಂದ<br>ಓದಿಸುವುದು ಲಾವಣಿಯಲ್ಲಿ ಬಂದಿರುವ<br>ಪಾತ್ರಗಳನ್ನು ಅಭಿನಯಿಸು ವಂತೆ<br>ಪ್ರೇರೇಸುವುದು, ಲಾವಣಿಗಳನ್ನು<br>ಹಾಡಿಸುವುದು. | ಓದಿಸುವುದು<br><br><br><br>ಅವಲೋಕನ | ತತ್ಸಮ–<br>ತದ್ಧವಗಳ<br>ಪಟ್ಟಿ<br><br><br>ತಪಶೀಲು<br>ಪಟ್ಟಿ | ಯಾರು ?<br><br>6)ಕಾರಕೂನ ಸಾಹೇಬಗ ಯಾವ<br>ವಿಷಯ ತಲುಪಿತು ?<br><br>7) ಬ್ಯಾಡರ ಹುಡುಗರಿಗೆ ಬುದ್ಧಿ<br>ಮಾತು ಹೇಳಿದವರು<br>ಯಾರು ?<br>8) ಹಲಗಲಿ ಗುರುತು<br>ಉಳಿಯದಂತಾದುದು ಏಕೆ |

ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10

ಪಾಠದ ಶೀರ್ಷಿಕೆ : ಧರ್ಮಸಮದೃಷ್ಟಿ (ಶಾಸನ ಸಂಗ್ರಹ)

**ಬೋಧನೆಯ ಉದ್ದೇಶಗಳು:** 1.ಶಾಸನಗ`ಳ ಮಹತ್ವವನ್ನು ತಿಳಿಸುವುದು.
2.ಸರ್ವಧರ್ಮಸಮದೃಷ್ಟಿಯನ್ನು ಬೆಳೆಸುವುದು.
3.ಬುಕ್ಕರಾಯನ ಉದಾತ್ತತೆಯನ್ನು ,ಧರ್ಮಸಾಮರಸ್ಯವನ್ನು ಬಿಂಬಿಸುವುದು.

**ಕಲಿಕಾ ಸಾಮಗ್ರಿಗಳು :** ಶಾಸನದ ಪಠ್ಯಭಾಗ,ಶಬ್ಧಕೋಶ, ಶಾಸನಗಳ ಚಿತ್ರಗಳು,ರಾಮಾನುಜಾಚಾರ್ಯರರ ಚಿತ್ರ,ಆಕಾರ ಕೃತಿ, ಶಾಸನಗಳ ಛಾಯಚಿತ್ರಗಳು

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | **ವೀರಬುಕ್ಕರಾಯನ ಪರಿಚಯ**<br><br>ರಾಮಾನುಜಾಚಾರ್ಯರರ ವರ್ಣನೆ<br><br>ಭಕ್ತರ ಬಿನ್ನಹ ಧರ್ಮಸಭೆಗೆ ಆಹ್ವಾನ ವೀರಬುಕ್ಕರಾಯನ ಧರ್ಮಸಾಮರಸ್ಯದ | **ಪ್ರೇರಣಾ ಚಟುವಟಿಕೆ**<br>ಕರ್ನಾಟಕದ ಅರಸು ಮನೆತನಗಳನ್ನು ಪಟ್ಟಿಮಾಡಿಸುವುದು,ವಿಜಯನಗರದ ಅರಸರುಗಳ ಹೆಸರುಗಳನ್ನು ಕಪ್ಪುಹಲಗೆ ಮೇಲೆ ಪಟ್ಟಿಮಾಡಿಸುವುದು ಅವುಗಳನ್ನು ಓದಿಸುವುದು ಆ ಮೂಲಕ ಬುಕ್ಕರಾಯನ ಪರಿಚಯ ಮಾಡಿಸುವುದು.<br>**ಪಾಠಪ್ರಕಿಯೆಗಳು**<br>ಶಾಸನಹಳ ವಿಧಗಳನ್ನು ಪಟ್ಟಿಮಾಡಿಸುವುದು, ವಿದ್ಯಾರ್ಥಿಗಳಿಗೆ ಗೊತ್ತಿರುವ ಶಾಸನಗಳ ಹೆಸರುಗಳನ್ನು ಕಪ್ಪುಹಲಗೆ ಮೇಲೆ | ಬರವಣಿಗೆ<br><br>ಬರೆಯುವುದು<br><br>ಪ್ರಶ್ನೋತ್ತರ | ಕಪ್ಪುಹಲಗೆ<br><br>ಕಪ್ಪುಹಲಗೆ<br><br>ಪ್ರಶ್ನಾಕೋಶ | 1) ಕರ್ನಾಟಕದ ಅರಸು ಮನೆತನಗಳನ್ನು ಪಟ್ಟಿಮಾಡಿರಿ<br>2) ವಿಜಯನಗರದ ಅರಸರುಗಳ ಹೆಸರುಗಳನ್ನು ಹೆಸರಿಸಿ<br>3) ಬುಕ್ಕರಾಯನು ಯಾವ ವಂಶಕ್ಕೆ ಸೇರಿದವನು<br>4) ಕನ್ನಡದ ಮೊದಲ ಶಾಸನ ಯಾವುದು ?<br>5) ಬುಕ್ಕರಾಯನ ಕಾಲದಲ್ಲಿ ಯಾರ ನಡುವೆ |

| | | | | | |
|---|---|---|---|---|---|
| | ಬೋಧನೆ<br>ಶಾಸನದ ಕಟ್ಟಳೆ<br>ಸೈದ್ಧಾಂತಿಕ ಭಾಷಾಭ್ಯಾಸ<br>(ಲೇಖನ ಚಿಹ್ನೆಗಳು)<br>ಅಭ್ಯಾಸ<br>ಚಟುವಟಿಕೆ(ಶಾಸನ<br>ಸಂಗ್ರಹ) | ಪಟ್ಟಿಮಾಡಿಸುವುದು.ಅವುಗಳನ್ನು<br>ಓದಿಸುವುದು ಆಮೂಲಕ<br>ಶ್ರವಣಬೆಳಗೊಳದ ಬುಕ್ಕರಾಯನ<br>ಶಾಸನವನ್ನು ಪರಿಚಯಿಸುವುದು<br>ರಾಮಾನುಜಾಚಾರ್ಯರ ಪರಿಚಯ ಶಾಸನದ<br>ಭಾಗವನ್ನು ಗಟ್ಟಿಯಾಗಿ ವಾಚಿಸುವುದು.<br>ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು<br>ಮಾಡಿಸುವುದು. ಪ್ರಶ್ನೋತ್ತರ ವಿಧಾನದ<br>ಮೂಲಕ ಚರ್ಚಿಸುತ್ತಾ ಅರ್ಥೈಸುವುದು<br>ಲೇಖನ ಚಿಹ್ನೆಗಳ ಕಾರ್ಡುಗಳನ್ನು<br>ವಿದ್ಯಾರ್ಥಿಗಳಿಗೆ ನೀಡಿ ಅವರಿಂದ<br>ಓದಿಸುವುದು.ವಿವರಿಸುವುದು<br>ಶಾಸನ ಸಂಗ್ರಹಿಸಲು ಪ್ರೇರೇಪಿಸುವುದು | ಓದುವುದು<br><br>ಅವಲೋಕನ | ಲೇಖನಚಿಹ್ನೆ<br>ಗಳಕಾರ್ಡು<br><br>ತಪಶಿಲುಪಟ್ಟಿ | ಸಂವಾದ ನಡೆಯಿತು ?<br>6) ಜನರು ಬುಕ್ಕರಾಯನಲ್ಲಿ<br>ಏನೆಂದುವಿಜ್ಞಾಪಿಸಿಕೊಂಡರು<br>7) ಬುಕ್ಕರಾಯನು<br>ಧರ್ಮಸಭೆಗೆ ಯಾರನ್ನು<br>ಆಹ್ವಾನಿಸಿದ್ದನು ?<br>8) ಬುಕ್ಕರಾಯನು<br>ಧರ್ಮಸಭೆಯಲ್ಲಿ ಏನು<br>ಹೇಳಿದನು ?<br>9) ಕಟ್ಟಳೆಯನ್ನು ಮೀರಿದರೆ<br>ಆಗುವ ಪರಿಣಾಮವೇನು ? |

ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10

ಪಾಠದ ಶೀರ್ಷಿಕೆ : ವಚನ ಸೌರಭ (ಜೇಡರ ದಾಸಿಮಯ್ಯ,ಬಸವಣ್ಣ)

**ಬೋಧನೆಯ ಉದ್ದೇಶಗಳು** : 1.ವಚನ ಸಾಹಿತ್ಯದ ಮಹತ್ವವನ್ನು ತಿಳಿಸುವುದು
2.ಭಕ್ತಿ ಮತ್ತು ನಿಷ್ಠೆ ಬದುಕಿನ ವಿಶಿಷ್ಟ ಮೌಲ್ಯಗಳೆಂಬುದನ್ನು ತಿಳಿಸುವುದು
3.ಮಾನವರ ಮನಸ್ಸು,ಸ್ವಭಾವ,ಮಾತಿನ ಮಹತ್ವ ಮುಂತಾದ ವಿಷಯಗಳ ಬಗ್ಗೆ ಅರಿವು ಮೂಡಿಸುವುದು

**ಕಲಿಕಾ ಸಾಮಗ್ರಿಗಳು** :ಜೇಡರ ದಾಸಿಮಯ್ಯ,ಬಸವಣ್ಣನವರ ಭಾವಚಿತ್ರಗಳು,ಪ್ರಶ್ನಾವಳಿ ವಚನಗಳ ಪುಸ್ತಕ, ವಚನಗಳ ಆಡಿಯೋ ಪ್ಲೇಯರ್ ,ಅಲಂಕಾರಗಳಪಟ್ಟಿ

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | **ವಚನ ಸಾಹಿತ್ಯ ಹಾಗೂ ವಚನಕಾರರ ಪರಿಚಯ** (ಜೇಡರ ದಾಸಿಮಯ್ಯ, ಬಸವಣ್ಣ)<br><br>ಸತಿಪತಿಗಳ ಭಕ್ತಿ<br>ನಿಷ್ಠೆಯುಳ್ಳ ಭಕ್ತ<br>ಬೆಂದಮನ ಮರ್ಕಟ<br>ಮಾನವರ ಸ್ವಭಾವ<br>ಮನದೊಳಗಿನ ವಿಷಯ<br>ಲಿಂಗಮೆಚ್ಚಿದ ಮಾತು | **ಪ್ರೇರಣಾ ಚಟುವಟಿಕೆ:**<br>ವಚನಕಾರರು ಹಾಗೂ ಅವರ ಅಂಕಿತನಾಮಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು,ಓದಿಸುವುದು.ವಿದ್ಯಾರ್ಥಿಗಳಿಗೆ ಗೊತ್ತಿರುವ ವಚನಗಳನ್ನು ಹಾಡಿಸುವುದು,ವಚನ ಸಂಗ್ರಹ ಪುಸ್ತಕದಲ್ಲಿನ ವಚನಗಳನ್ನು ಹಾಡಿಸುವುದು ಮತ್ತು ವಚನಗಳ ಆಡಿಯೋ ಕೇಳಿಸುವುದು ನಂತರ ವಚನಕಾರರಾದ ಜೇಡರ ದಾಸಿಮಯ್ಯ,ಬಸವಣ್ಣನವರ ಪರಿಚಯ ಮಾಡಿಸುವುದು<br>**ಪಾಠಪ್ರಕ್ರಿಯೆಗಳು**<br>ವಚನ ಸೌರಭ ಪದ್ಯದ ವಚನಗಳನ್ನು | ಬರವಣಿಗೆ<br><br>ಹಾಡುವುದು<br>ಕೇಳಿಸುವುದು<br><br>ಪ್ರಶ್ನೋತ್ತರ | ಕಪ್ಪುಹಲಗೆ<br><br>ವಚನಗಳ ಪುಸ್ತಕ<br>ವಚನಗಳ ಆಡಿಯೋ ಪ್ಲೇಯರ್<br><br>ಪ್ರಶ್ನಾಕೋಶ | 1) ವಚನ ಎಂದರೇನು ?<br>2) ಬಸವಣ್ಣನವರ ವಚನಗಳ ಅಂಕಿತನಾಮ ನಾಮವೇನು ?<br>3)ರಾಮನಾಥ ಎಂಬುದು ಯಾರ ಅಂಕಿತನಾಮ ವಾಗಿದೆ ?<br>4) ಅಕ್ಕಮಹಾದೇವಿ ವಚನಗಳ ಅಂಕಿತನಾಮ ನಾಮವೇನು ?<br>5) ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?<br>6) ಬಸವಣ್ಣನವರು |

| | | | | | |
|---|---|---|---|---|---|
| | ಸೈದ್ಧಾಂತಿಕ ಭಾಷಾಭ್ಯಾಷ (ಅಲಂಕಾರಗಳು) ಅಭ್ಯಾಸ ಚಟುವಟಿಕೆ ವಚನಗಳ ಸಂಗ್ರಹ | ರಾಗವಾಗಿ,ಗಟ್ಟಿಯಾಗಿ,ಹಾಡಿಸುವುದು, ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು ಪ್ರಶ್ನೋತ್ತರ ವಿಧಾನದ ಮೂಲಕ ಸತಿಪತಿಗಳ ಭಕ್ತಿ ನಿಷ್ಟೆಯುಳ್ಳ ಭಕ್ತ ,ಬೆಂದಮನ ಮರ್ಕಟ ,ಮಾನವರ ಸ್ವಭಾವ ,ಮನದೊಳಗಿನ ವಿಷಯ, ಲಿಂಗಮೆಚ್ಚಿದ ಮಾತು ಮುಂತಾದ ವಿಷಯಗಳ ಬಗ್ಗೆ ಅರ್ಥೈಸುವುದು<br><br>ಅಲಂಕಾರಗಳ ಪಟ್ಟಿ ಉದಾಹರಣೆಗನ್ನು ವಿದ್ಯಾಥಿಗಳಿಗೆ ವಿವರಿಸುವುದು ವಚನಗಳನ್ನು ಸಂಗ್ರಹಿಸಲುಪ್ರೇರೇಪಿಸುವುದು | ವಿದ್ಯಾರ್ಥಿ ಗಳಿಂದ ಗುರುತಿಸುವುದು ವಚನಗಳ ಸಂಗ್ರಹ ಅವಲೋಕನ | ಅಲಂಕಾರಗಳ ಪಟ್ಟಿ ಗ್ರಂಥಾಲಯ ತಪಶೀಲುಪಟಿ ಟ | ಮರ್ಕಟಕ್ಕೆ ಯಾವುದನ್ನು ಹೋಲಿಸಿದ್ದಾರೆ ?<br>7) ಬಸವಣ್ಣನವರು ಮಾನವನ ಸ್ವಭಾವವನ್ನು ಯಾವುದಕ್ಕೆ ಹೋಲಿಸಿದ್ದಾರೆ<br>8) ಮನೆಯೊಳಗೆ ಮನೆಯ ಒಡೆಯ ಇಲ್ಲದಿದ್ದರೆ ಏನಾಗುತ್ತದೆ ?<br>8) ಬಸವಣ್ಣನವರ ಪ್ರಕಾರ ಮಾತು ಹೇಗಿರಬೇಕು ? |

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ(ಡಿ.ಎಸ್.ಜಯಪ್ಪಗೌಡ)**

**ಬೋಧನೆಯ ಉದ್ದೇಶಗಳು** : 1.ಜೀವನ ಚರಿತ್ರೆ,ಆತ್ಮಕತೆಗಳ ಅಧ್ಯಯನದ ಬಗ್ಗೆ ಆಸಕ್ತಿ ಮೂಡಿಸುವುದು.
2.ಸರ್.ಎಂ.ವಿಶ್ವೇಶ್ವರಯ್ಯನವರ ಆದರ್ಶಘಳನ್ನು ಅರಿತುಕೊಳ್ಳುವುದು.
3.ಪರಿಶ್ರಮ,ಪ್ರತಿಭೆ,ನಿಷ್ಠೆ,ಧ್ಯೇಯ,ದೃಢಸಂಕಲ್ಪಗಳಿದ್ದರೆ ಯಶಸ್ಸು ಪಡೆಯಬಹುದೆಂಬುದನ್ನು ತಿಳಿಸುವುದು.

**ಕಲಿಕಾ ಸಾಮಗ್ರಿಗಳು** : ಸರ್.ಎಂ.ವಿಶ್ವೇಶ್ವರಯ್ಯನವರ ಭಾವಚಿತ್ರ,ಸಾಧಕರ ಚಿತ್ರಗಳು ,ಪ್ರಶ್ನಾವಳಿ , ಸಾಧಕರ ಹೆಸರುಗಳ ಕಾರ್ಡುಗಳು , ಜೀವನ ಚರಿತ್ರೆ,ಆತ್ಮಕತೆಗಳಪುಸ್ತಕ,

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | **ಕವಿ–ಕಾವ್ಯ ಪರಿಚಯ**<br>ನೆಹರುರವರ ಅಭಿಮಾನದ ನುಡಿಗಳು<br>ಸರ್.ಎಂ.ವಿ ರವರ ಬಾಲ್ಯಜೀವನ<br>ಸರ್.ಎಂ.ವಿ ರವರ ಶಿಕ್ಷಣ<br>ಮುಂಬೈ ಮತ್ತು ಪೂನಾ ನಗರಗಳಲ್ಲಿ<br>ಸರ್.ಎಂ.ವಿರವರ ಸೇವೆ<br>ಮೈಸೂರು ಸಂಸ್ಥಾನದಲ್ಲಿ | **ಪ್ರೇರಣಾ ಚಟುವಟಿಕೆ:**<br>ಪ್ರತಿಯೊಬ್ಬ ವಿದ್ಯಾರ್ಥಿಗೆ ಒಬ್ಬೊಬ್ಬ ಸಾಧಕರ ಚಿತ್ರ,ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಹೆಸರಿನ ಕಾರ್ಡುಗಳು, ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಜೀವನಚರಿತ್ರೆಯ ಪುಸ್ತಕಗಳನ್ನು ನೀಡುವುದು.ಚಿತ್ರ ಮತ್ತು ಸಾಧಕರ ಹೆಸರು ಹೊಂದಿಸುವಂತೆ ತಿಳಿಸುವುದು,ಮತ್ತು ಅವರ ಜೀವನ ಚರಿತ್ರೆ ಪಡೆದಿರುವ ವಿದ್ಯಾರ್ಥಿಗಳಿಂದ ಅವರ ಪರಿಚಯ ಮಾಡುವಂತೆ | ಸಾಧಕರನ್ನು ಗುರುತಿಸುವುದು<br><br>ಸಾಧಕರ ಪರಿಚಯ | ಸಾಧಕರ ಹೆಸರುಗಳ ಕಾರ್ಡುಗಳು<br><br>ಜೀವನ ಚರಿತ್ರೆ, ಆತ್ಮಕತೆಗಳ ಪುಸ್ತಕ | 1) ಭಾರತ ರತ್ನ ಪ್ರಶಸ್ತಿ ಪಡೆದ ಐದು ಸಾಧಕರನ್ನು ಹೆಸರಿಸಿ.<br>2) ಭಾರತ ರತ್ನ ಪ್ರಶಸ್ತಿ ಪಡೆದ ಮೈಸೂರಿನ ದಿವಾನರು ಯಾರು<br>3)ಸರ್.ಎಂ.ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಂಭ್ರಮ ಎಲ್ಲಿ ನಡೆಯಿತು ?<br>4)ಸರ್.ಎಂ.ವಿಶ್ವೇಶ್ವರಯ್ಯನವರ |

| | | | | | |
|---|---|---|---|---|---|
| | ಇಂಜಿನಿಯರ್ ಆಗಿ ಸರ್.ಎಂ.ವಿ ರವರ ಸೇವೆ<br><br>ದಿವಾನರಾದ ಸರ್.ಎಂ.ವಿರವರುಸರ್.ಎಂ. ವಿರವರ ದಿವಾನರಾಗಿ ಸಾಧನೆಗಳು<br><br>ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವ<br><br>ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ಸರ್.ಎಂ.ವಿ<br><br>ಸೈದ್ಧಾಂತಿಕ ಭಾಷಾಭ್ಯಾಸ (ಸಮಾಸಗಳು)<br>ಅಭ್ಯಾಸ ಚಟುವಟಿಕೆ<br><br>(ಸಾಧಕರ ಚಿತ್ರ ಸಂಗ್ರಹ) | ಪ್ರೇರೇಪಿಸುವುದು,ಆ ಮೂಲಕ ಸರ್.ಎಂ.ವಿರವರ ಜೀವನ ಪರಿಚಯಿಸುವುದು.<br>**ಪಾಠಪ್ರಕ್ರಿಯೆಗಳು**<br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು,<br>ನಂತರ ಪ್ರಶ್ನೋತ್ತರ ವಿಧಾನದ ಮೂಲಕ ಸರ್.ಎಂ.ವಿ ರವರ ಬಾಲ್ಯಜೀವನ ಶಿಕ್ಷಣ ಮುಂಬೈ ಮತ್ತು ಪೂನಾ ನಗರಗಳಲ್ಲಿ ಸರ್.ಎಂ.ವಿರವರ ಸೇವೆ ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರ್ ಆಗಿ ಸರ್.ಎಂ.ವಿರವರ ಸೇವೆ ದಿವಾನರಾದ ಸರ್.ಎಂ.ವಿರವರು ಸರ್.ಎಂ.ವಿರವರ ದಿವಾನರಾಗಿ ಸಾಧನೆಗಳು ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವಗಳನ್ನು ಕುರಿತು ವಿವರಿಸುವುದು.<br>ಸಮಾಸ-ಉದಾಹರಣೆ ಪಟ್ಟಿಗಳೊಂದಿಗೆ ವಿವರಿಸುವುದು<br>ಸಾಧಕರ ಚಿತ್ರಸಂಗ್ರಹಿಸಲು ಪ್ರೇರೇಪಿಸುವುದು | ಪ್ರಶ್ನೋತ್ತರ<br><br>ಬರವಣಿಗೆ<br><br>ಬರವಣಿಗೆ<br><br>ಅವಲೋಕನ | ಪ್ರಶ್ನಾಕೋಶ<br><br>ಎಂ.ವಿರವರ ಸಾಧನೆಗಳ ಪಟ್ಟಿ<br><br>ಸಮಾಸಗಳ ಪಟ್ಟಿ<br><br>ತಪಶೀಲು ಪಟ್ಟಿ | ಶತಮಾನೋತ್ಸವ ಸಂಭ್ರಮದಲ್ಲಿ ಭಾಗವಹಿಸಿದ್ದ ಪ್ರಧಾನಿ ಯಾರು?<br><br>5)ಸರ್.ಎಂ.ವಿಶ್ವೇಶ್ವರಯ್ಯನವರ ಗುರುಗಳು ಯಾರು?<br><br>6)ಸರ್.ಎಂ.ವಿಶ್ವೇಶ್ವರಯ್ಯನವರು ಸ್ವಯಂಚಾಲಿತ ಬಾಗಿಲುಗಳನ್ನು ಯಾವ ಜಲಾಶಯಗಳಿಗೆ ಅಳವಡಿಸಿದರು ?<br><br>7)ಸರ್.ಎಂ.ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ಮಾಡಿದ ಅರಸು ಯಾರು ?<br>8)ಕ.ಸಾ.ಪ ಸ್ಥಾಪಕರು ಯಾರು<br><br>9)ಸರ್.ಎಂ.ವಿಶ್ವೇಶ್ವರಯ್ಯನವರ ಕೈಗಾರಿಕಾ ಘೋಷಣೆ ಏನು ?<br>10)ಸರ್.ಎಂ.ವಿಶ್ವೇಶ್ವರಯ್ಯನವರ ಆತ್ಮಕಥೆ ಯಾವುದು ? |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ಸಂಕಲ್ಪ ಗೀತೆ(ಜಿ.ಎಸ್.ಶಿವರುದ್ರಪ್ಪ )**

**ಬೋಧನೆಯ ಉದ್ದೇಶಗಳು :** 1.ಜೀವನದಲ್ಲಿ ಧನಾತ್ಮಕ ಭಾವನೆಯನ್ನು,ದೃಢಸಂಕಲ್ಪ ಹೊಂದಿರಬೇಕೆಂಬುದನ್ನು ತಿಳಿಸುವುದು.
2.ಸಾಧಕರಿಗೆ ಆತ್ಮವಿಶ್ವಾಸ,ಸಂಕಲ್ಪನಿಷ್ಠೆ,ಕ್ರೀಯಾಶೀಲತೆ ಎಷ್ಟು ಮುಖ್ಯವೆಂಬುದನ್ನು ಅರಿಯುವುದು.
3.ಸ್ವಾಸ್ಥನೆಲೆಯ ಸಮಾಜ ನಿರ್ಮಾಣಕ್ಕೆ ಪ್ರೀತಿಯ ಹಣತೆ ಹಚ್ಚಬೇಕೆಂಬ ಸಂಕಲ್ಪ ಮಾಡಿಸುವುದು.

**ಕಲಿಕಾ ಸಾಮಗ್ರಿಗಳು :** ರಾಷ್ಟ್ರಕವಿಗಳ ಭಾವಚಿತ್ರಗಳು ಕವಿ,ಕಾವ್ಯ ಪರಿಚಯದ ಚಾರ್ಟ್, ಪ್ರಶ್ನಾಕೋಶ, ಪದಗಳ ಅರ್ಥಗಳ ಚಾರ್ಟ್,ವಿಭಕ್ತಿಪ್ರತ್ಯಯಗಳ ಚಾರ್ಟ್,ಕ್ರೀಯಾಪದಗಳ ಪಟ್ಟಿ, ಜಿ.ಎಸ್. ಶಿವರುದ್ರಪ್ಪನವರ ಕೃತಿಗಳು

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | ಕವಿ ಶಿವರುದ್ರಪ್ಪನವರ ಪರಿಚಯ<br><br>ಪ್ರೀತಿಯ ಹಣತೆ ಹಚ್ಚಿ ಜೀವನ ಮುನ್ನಡೆಸುವುದು<br>ಮುಂಗಾರಿನ ಮಳೆ ಮತು ವಸಂತ<br>ಹೊಸಭರವಸೆಗಳ ಸೇತುವೆ<br><br>ಹೊಸ ಬಾಳಿನ ಹೊಸ ಕನಸನು ಬಿತ್ತೋಣ | **ಪ್ರೇರಣಾ ಚಟುವಟಿಕೆ:**<br>ವಿದ್ಯಾರ್ಥಿಗಳಿಗೆ ಕನ್ನಡದ ರಾಷ್ಟ್ರಕವಿಗಳ ಭಾವಚಿತ್ರಗಳನ್ನು ತೋರಿಸುವುದು,ಆ ಮೂಲಕ ಜಿ.ಎಸ್.ಶಿವರುದ್ರಪ್ಪನವರನ್ನುಪರಿಚಯಿಸುವುದು.ಅವರ ಕೆಲವು ಕೃತಿಗಳಗನ್ನು ತೋರಿಸುತ್ತಾ ಎದೆತುಂಬಿ ಹಾಡಿದನು ಕವನ ಸಂಕಲನದಲ್ಲಿನ ಭಾವಗೀತೆಗಳ ಶೀರ್ಷಿಕೆಗಳನ್ನು ಬರೆಸುವುದು ಅದರಲ್ಲಿನ ಸಂಕಲ್ಪಗೀತೆ ಪದ್ಯವನ್ನು ಗುರುತಿಸುವುದು<br>**ಪಾಠ ಪ್ರಕ್ರಿಯೆಗಳು**<br>ಸಂಕಲ್ಪಗೀತೆ ಪದ್ಯವನ್ನು ಆಡಿಯೋ ಮೂಲಕ | ಕವಿ ಚಿತ್ರಗುರುತಿಸುವುದು<br><br>ಕವಿಪರಿಚಯ<br><br>ಆಕಾರ ಗ್ರಂಥ ಗುರುತಿಸಿವುದು<br>ಗೀತೆ ಕೇಳಿಸುವುದು<br>ಪದ್ಯ | ಕವಿಗಳ ಚಿತ್ರಗಳು<br><br>ಕವಿಕಾವ್ಯ ಪರಿಚಯ ಚಾರ್ಟ್<br>ಆಕಾರ ಗ್ರಂಥ<br><br>ಆಡಿಯೋ | 1.ಕನ್ನಡದ ರಾಷ್ಟ್ರಕವಿಗಳನ್ನು ಹೆಸರಿಸಿ<br>2.ಜಿ.ಎಸ್.ಶಿವರುದ್ರಪ್ಪನವರ ಯಾವ ಕೃತಿಗೆ ಕೇಂದ್ರಸಾಹಿತ್ಯ ಆಕಾಡೆಮಿ ಪ್ರಶಸ್ತಿ ದೊರೆತಿದೆ<br>3.ಸಂಕಲ್ಪಗೀತೆ ಪದ್ಯವನ್ನು ಜಿ.ಎಸ್. ಶಿವರುದ್ರಪ್ಪನವರ ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.?<br>4.ಎಂತಹ ಹಣತೆ ಹಚ್ಚಬೇಕೆಂದು ಕವಿ |

| | | | | | |
|---|---|---|---|---|---|
| | ಸೈದ್ಧಾಂತಿಕ ಭಾಷಾಭ್ಯಾಸ<br>ಕ್ರಿಯಾಪದಗಳು<br>ವಿಭಕ್ತಿ ಪ್ರತ್ಯಯಗಳು<br>ಅಭ್ಯಾಸ ಚಟುವಟಿಕೆ<br>ಕಂಠಪಾಠ<br>(ನಿಗದಿತ ಪದ್ಯಭಾಗ) | ಕೇಳಿಸುವುದು.ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು ಶಿಕ್ಷಕರ ಪದ್ಯ ವಾಚನ ಪದ್ಯಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು ನಂತರ ಹೊಸಪದಗಳ ಅರ್ಥಗಳನ್ನು ಬಳಸಿ ಪದ್ಯಗಳ ಸಾರಂಶವನ್ನು ವಿದ್ಯಾರ್ಥಿಗಳಿಂದ ಬರೆಸಲು ಪ್ರಯತ್ನಿಸುವುದು ಪದ್ಯದ ಭಾವಾರ್ಥವನ್ನು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು ಕ್ರಿಯಾಪದಗಳ ಮತ್ತು ವಿಭಕ್ತಿ ಪ್ರತ್ಯಯಗಳ ಚಾರ್ಟ್ ಬಳಸಿ ಅರ್ಥೈಸುವುದು ನಿಗದಿತ ಪದ್ಯಭಾಗ ಕಂಠಪಾಠ ಮಾಡಿಸುವುದು ತರಗತಿಯಲ್ಲಿ ವಿದ್ಯಾರ್ಥಿಗಳಿಂದ ರಾಗಬದ್ಧವಾಗಿ ಹಾಡಿಸುವುದು | ಬರವಣಿಗೆ<br>ಪ್ರಶ್ನೋತ್ತರ<br><br>ವಿ.ಪ್ರ.<br>ಗುರುತಿಸುವದು<br><br>ಅವಲೋಕನ | ಕಪ್ಪುಹಲಗೆ<br>ಪ್ರಶ್ನಾಕೋಶ<br><br>ವಿ.ಪ್ರ.ಚಾರ್ಟ್<br><br><br>ತಪಶೀಲು<br>ಪಟ್ಟಿ | ಹೇಳುತ್ತಾರೆ ?<br>5.ಯಾವುಗಳಿಗೆ ಮುಂಗಾರಿನ ಮಳೆಯಾಗಬೇಕು ?<br>6.ಏನನ್ನು ಕೆಡವಿ ಸೇತುವೆಯನ್ನು ಕಟ್ಟಬೇಕು<br>7.ಯಾವ ಎಚ್ಚರದಲ್ಲಿ ಬದುಕಬೇಕು ?<br>8.ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ? |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ಎದೆಗೆ ಬಿದ್ದ ಅಕ್ಷರ (ದೇವನೂರ ಮಹದೇವ)**

**ಬೋಧನೆಯ ಉದ್ದೇಶಗಳು** : 1) ಮೂಢನಂಬಿಕೆಗಳ ವಿರುದ್ಧ ಹೋರಾಡಲು –ಅನುಸರಿಸದಿರಲು ಪ್ರೇರೇಪಿಸುವುದು
2) ಸಮಾನತೆ,ಸತ್ಯ,ಧರ್ಮ,ಜಾತ್ಯತೀತತೆ,ಜಾಗತಿಕರಣ ಮುಂತಾದ ವಿಚಾರಗಳ ಬಗ್ಗೆ ಅರಿವು ಮೂಡಿಸುವುದ
3) ಸಮರ್ಪಣಭಾವ,ಸಹಕಾರ,ಸೌಜನ್ಯತೆ,ನಿಷ್ಪಕ್ಷಪಾತ ಮುಂತಾದ ಮೌಲ್ಯಗಳನ್ನು ಬೆಳೆಸುವುದು

**ಕಲಿಕಾ ಸಾಮಗ್ರಿಗಳು** : ದೇವನೂರ ಮಹಾದೇವ, ಗಾಂಧಿ, ಬುದ್ಧ,ಬಸವಣ್ಣ, ಪರಮಹಂಸ, ಅಂಬೇಡ್ಕರ್, ಟಾಲ್‌ಸ್ಟಾಯ್, ಕುವೆಂಪು, ಬೇಂದ್ರೆ ಮುಂತಾದವರ ಭಾವಚಿತ್ರಗಳು ,ಆಕಾರ ಗ್ರಂಥ, ಪ್ರಶ್ನಾಕೋಶ, ಪ್ರಬಂಧ ಬರಹಗಳು

| **ಅವಧಿ** | **ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
|---|---|---|---|---|---|
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ** |
| | ಕವಿ ದೇವನೂರ ಮಹಾದೇವರವರ ಪರಿಚಯ<br><br>ನನ್ನ ದೇವರು ಮನೆಮಂಚಮ್ಮನ ಕತೆ<br><br>ವಚನ ಧರ್ಮ<br>ಸತ್ಯ ಸಮಾನತೆ–ಆರ್ತತೆ | **ಪ್ರೇರಣಾ ಚಟುವಟಿಕೆ:**<br>ನಮ್ಮ ಭಾರತ ದೇಶದಲ್ಲಿರುವ ಮೂಢನಂಬಿಕೆಗಳ ಪಟ್ಟಿ ಮಾಡಿಸುವುದು 'ಮೂಢನಂಬಿಕೆಗಳು'ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ ಏರ್ಪಡಿಸುವುದು ನಂತರ ಪ್ರಶ್ನೋತ್ತರ ಚರ್ಚೆ ನಡೆಸುವುದು.ಮೂಢನಂಬಿಕೆಗಳಿಂದ ಸಮಾಜದ ಮೇಲಾಗುವ ಪರಿಣಾಮಗಳನ್ನು ವಿವರಿಸುವುದು,<br>**ಪಾಠಪ್ರಕ್ರಿಯೆಗಳು**<br>ವಿದ್ಯಾರ್ಥಿಗಳ ಮೂಲಕ ಕಪ್ಪುಹಲಗೆಯ ಮೇಲೆ ಕವಿಯ ಸ್ಥಳ,ಕಾಲ,ಕೃತಿಗಳನ್ನು | ಮೂಢನಂಬಿಕೆಗಳ ಪಟ್ಟಿ ಮಾಡಿಸುವುದು<br><br>ಅವಲೋಕನ<br>ಕವಿ ಪರಿಚಯಿಸುವುದು | ಕಪ್ಪುಹಲಗೆ<br><br>ತಪಶೀಲು ಪಟ್ಟಿ<br><br>ವಿದ್ಯಾರ್ಥಿಗಳು<br>ಕಪ್ಪುಹಲಗೆ | 1)ಮೂಢನಂಬಿಕೆಗಳು ಯಾವುವು ?<br>2)ಮೂಢನಂಬಿಕೆಗಳ ವಿರುದ್ಧ ಹೋರಾಡಿದ ಸಮಾಜ ಸುಧಾರಕರನ್ನು ಹೆಸರಿಸಿ.<br>3)ಮಂಚಮ್ಮದೇವಿ ಕತೆ ಹೇಳಿದವರು ಯಾರು?<br>4)ಮಂಚಮ್ಮ ಮನೆಮಂಚಮ್ಮ ನಾದದ್ದು ಹೇಗೆ<br>5)ಇಂದು ಮನೆಮಂಚಮ್ಮ |

| | | | | | |
|---|---|---|---|---|---|
| | ಸಂಶೋಧನ ಸತ್ಯ<br>ಬುದ್ಧನ ಕಾರುಣ್ಯ<br>ಸೈದ್ಧಾಂತಿಕ<br>ಭಾಷಾಭ್ಯಾಷ<br>ತದ್ಧಿತಾಂತಗಳು | ಬರೆಸುವುದರ ಮೂಲಕ ಕವಿ<br>ಪರಿಚಯಿಸುದುಪಾಠವನ್ನು ಗಟ್ಟಿಯಾಗಿ<br>ಸ್ವರಭಾರದೊಂದಿಗೆ ಓದುವುದು,<br>ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓ<br>ದಿಸುವುದು,ಮೌನವಾಚನ ನೀಡುವುದು,<br>ನಂತರ ಪ್ರಶ್ನೋತ್ತರ ವಿಧಾನದ ಮೂಲಕ<br>ಕಥಾನಕ ವಿಧಾನದ ಮೂಲಕ ನನ್ನ<br>ದೇವರು ಮನೆಮಂಚಮ್ಮನ ಕತೆ ವಚನ<br>ಧರ್ಮ ಸತ್ಯ ಸಮಾನತೆ-ಆರ್ತತೆ<br>ಪೈಗಳಸಂಶೋಧನ ಸತ್ಯ<br>ಬುದ್ಧನ ಕಾರುಣ್ಯ ಮುಂತಾದವಿಚಾರಗಳನ್ನು<br>ಚಿತ್ರಗಳನ್ನು ಬಳಸಿಕೊಂಡು ಅರ್ಥೈಸುವುದು.<br>ತದ್ಧಿತಾಂತಗಳ ಚಾರ್ಟು ಬಳಸಿ<br>ಅರ್ಥೈಸುವುದು | ಪ್ರಶ್ನೋತ್ತರ<br><br><br><br><br><br>ಅವಲೋಕನ | ಪ್ರಶ್ನಾಕೋಶ<br><br><br><br><br><br>ತಪಶೀಲು<br>ಪಟ್ಟಿ | ಡಲ್ಲಿ ಪೂಜಿತಳಾಗುತ್ತಳೆ?<br>6)ವಿವೇಕಾನಂದರ ಗುರು<br>ಯಾರು ?<br>7)ಟಾಲ್ ಸ್ಟಾಯ್ ರವರ<br>ಪ್ರಸಿದ್ಧ ಕೃತಿ ಯಾವುದು ?<br>8)ಅಶೋಕ ಪೈ ಯಾರು ?<br>9)ಮಲೆಗಳಲ್ಲಿಮದುಮಗಳ<br>ು ಕಾದಂಬರಿಬರೆದವರು<br>ಯಾರು ? |

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

ಪಾಠದ ಶೀರ್ಷಿಕೆ : ಕೌರವೇಂದ್ರನ ಕೊಂದೆ ನೀನು (ಕುಮಾರವ್ಯಾಸ)

**ಬೋಧನೆಯ ಉದ್ದೇಶಗಳು** :1.ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಆಪೇಕ್ಷಣೀಯವೆಂಬುದನ್ನು ತಿಳಿಸುವುದು.
2.ಮಹಾಭಾರತದ ಪಾತ್ರಗಳಲ್ಲಿನ ಉತ್ತಮ ಮೌಲ್ಯಗಳನ್ನು ಬೆಳೆಸುವುದು
3.ಕರ್ಣನ ಸ್ವಾಮಿನಿಷ್ಠೆ,ಕೃಷ್ಣನ ಧರ್ಮಕ್ಷಮತೆಯ ಮಹತ್ವವನ್ನು ಅರಿಯುವುದು

**ಕಲಿಕಾ ಸಾಮಗ್ರಿಗಳು** : ಕುಮಾರವ್ಯಾಸನ ಭಾವಚಿತ್ರ,ಆಕಾರ ಗ್ರಂಥ,ಕುಮಾರವ್ಯಾಸ ನಿಘಂಟು, ಪ್ರಶ್ನಾಕೋಶ, ಕೃಷ್ಣ–ಕರ್ಣರು ರಥವೇರಿದ ಕಾಲ್ಪನಿಕ ಚಿತ್ರ, ಮಹಾಭಾರತ ಪಾತ್ರಪರಿಚಯ ಪುಸ್ತಕ,

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | ಕುಮಾರವ್ಯಾಸನ ಪರಿಚಯ ಪೂರ್ವಕತೆ ಕರ್ಣನನ್ನು ಬರಸೆಳೆದ ಕೃಷ್ಣ<br><br>ರವಿಸುತನ ಕಿವಿಯಲಿ ಉಭಯ ಭಿತ್ತಿದ ದಾನವಸೂದನ ಮಂತ್ರಮಹಿಮೆ ಕರ್ಣನಿಗೆ ರಾಜ್ಯದ ಆಸೆ ತೋರಿಸಿದ | **ಪ್ರೇರಣಾ ಚಟುವಟಿಕೆ**<br>ಹಳಗನ್ನಡ ನಡುಗನ್ನಡ ಕವಿಗಳನ್ನು ಪಟ್ಟಿಮಾಡಿಸುವುದು. ಕನ್ನಡದಲ್ಲಿ ಮಹಾಭಾರತ ಕತೆಗಳನ್ನು ಬರೆದ ಕವಿಗಳನ್ನು ವಿಂಗಡಿಸುವುದು ಆಮೂಲಕ ಕುಮಾರವ್ಯಾಸ ಕವಿಯ ವಿವರಗಳನ್ನು ವಿದ್ಯಾರ್ಥಿಗಳಿಂದ ಕಪ್ಪು ಹಲಗೆ ಮೇಲೆ ಬರೆಯಿಸಿ ಓದಿಸಿ ಪರಿಚಯಿಸುವುದು. ಮಹಾಭಾರತದಲ್ಲಿ ಬರುವ ಪಾತ್ರಗಳನ್ನು ಪಟ್ಟಿಮಾಡಿಸಿ, ಬರೆಸಿ ಅವರಿಗೆ ಗೊತ್ತಿರುವ ಪಾತ್ರಗಳ ಬಗ್ಗೆ ಪರಿಚಯಿಸುವಂತೆ | ಅವಲೋಕನ<br><br><br><br>ಬರವಣಿಗೆ ಮೂಲಕ ಕವಿಪರಿಚಯ ಪಾತ್ರ ಪರಿಚಯ | ತಪಶೀಲು ಪಟ್ಟಿ<br><br><br><br>ಕಪ್ಪುಹಲಗೆ<br><br>ಮಹಾಭಾರತ ಪಾತ್ರಪರಿಚಯ ಪುಸ್ತಕ | 1)ಹಳಗನ್ನಡ ಕವಿಗಳನ್ನು ಹೆಸರಿಸಿ<br>2)ರಾಮಾಯಣ,ಮಹಾಭಾರತದ ಕರ್ತೃಗಳಾರು ?<br>3)ಆದಿಕವಿ ಯಾರು<br>4)ಪಾಂಡುರೈವರನ್ನು ಹೆಸರಿಸಿ.<br>5)ಕುಮಾರವ್ಯಾಸನ ಮೂಲ ಹೆಸರೇನು?<br>6)ಕುಮಾರವ್ಯಾಸನ ಬಿರುದು ಯಾವುದು ?<br>7)ಕೃಷ್ಣನು ರಥದಲ್ಲಿ |

| | | | | | |
|---|---|---|---|---|---|
| | ಮುರಾರಿ<br>ಕರ್ಣನ ಧರ್ಮಸಂಕಟ<br>ಕೌರವೇಂದ್ರನ ಕೊಂದೆ ನೀನು<br>ವೀರರೈವರನು<br>ನೋಹಿಸಿನು<br>ಸೈದ್ಧಾಂತಿಕ<br>ಭಾಷಾಭ್ಯಾಸ<br>ಗ್ಣಣಗಳು,ಷಟ್ಪದಿಗಳು<br>ರೂಪಾಕಾಲಂಕಾರ<br>ಅಭ್ಯಾಸ ಚಟುವಟಿಕೆ<br>ಪದ್ಯ ಕಂಠಪಾಠ | ಪ್ರೇರೇಪಿಸುವುದು.<br>**ಪಾಠ ಪ್ರಕ್ರಿಯೆಗಳು** ಪೂರ್ವಕತೆಯನ್ನು ಹೇಳಿದ ನಂತರ ಪದ್ಯಭಾಗವನ್ನು ಗಮಕದಲ್ಲಿ ರಾಗವಾಗಿ ಗಟ್ಟಿಯಾಗಿ ಹಾಡುವುದು.<br>ಆಡಿಯೋವನ್ನು ಕೇಳಿಸುವುದು ಪದಬಿಡಿಸಿ ಓದುವುದು ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು. ಅಭಿನಯದ ಮೂಲಕ ಅರ್ಥೈಸಲು ಪ್ರಯತ್ನಿಸುವುದು. ವಿದ್ಯಾರ್ಥಿಗಳನ್ನು ಅಭಿನಯಿಸಲು ಪ್ರೇರೇಪಿಸುವುದು.<br>ಗಣಗಳು.ಷಟ್ಪದಿಗಳ ಚಾರ್ಟುಗಳನಗನ್ನು ಬಳಸಿಕಂಡು ಅರ್ಥೈಸುವುದು<br>ವಿದ್ಯಾರ್ಥಿಗಳಿಂದ ಕಪ್ಪು ಹಲಗೆ ಮೇಲೆ ಬರೆಯಿಸಿ ಓದಿಸಿ ಪರಿಚಯಿಸುವುದು. ನಿಗಧಿತ ಪದ್ಯಭಾಗವನ್ನು ಕಂಠಪಾಠ ಮಾಡಿಸಿ ಹೇಳಿಸುವುದು ಹೇಳಿಸುವುದು | ಪ್ರಶ್ನೋತ್ತರ<br><br>ಗಣಗುರುತಿಸುವುದು<br><br>ಕಂಠಪಾಠ ಮಾಢಿಸುವುದು | ಪ್ರಶ್ನಾಕೋಶ<br><br>ಗಣಗಳ ಚಾರ್ಟು<br><br>ಪಠ್ಯಪುಸ್ತಕ | ಯಾರನ್ನುಕೂರಿಸಿಕೊಂಡನು<br>8)ಕೃಷ್ಣ ಯಾರಲ್ಲಿ ಭೇಧವಿಲ್ಲವೆಂದು ಹೇಳಿದನು<br>9) ಕುಂತಿಪುತ್ರರಲ್ಲಿ ಮೊದಲಿಗ ಯಾರು ?<br>10)ಮಾದ್ರಿಯ ಪುತ್ರರನ್ನು ಹೆಸರಿಸಿ<br>11)ಕೃಷ್ಣನು ಕರ್ಣನಿಗೆ ಯಾವ ಘನತೆಯನ್ನು ಮಾಡುತ್ತೆನೆಂದು ಹೇಳಿದನು<br>12)ಕರ್ಣ ಯಾರಿಗೆ ಕೇಡಾಯಿತೆಂದು ಮನದಲ್ಲಿ ಹೇಳಿಕಂಡನು<br>13)ಕರ್ಣ ಯಾರನ್ನು ನೋಯಿಸುವುದಿಲ್ಲ ಎಂದು ಹೇಳಿದನು ? |

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ :ವೃಕ್ಷಸಾಕ್ಷಿ (ಗದ್ಯ) ದುರ್ಗಸಿಂಹ**

**ಬೋಧನೆಯ ಉದ್ದೇಶಗಳು** :1.ಹಳಗನ್ನಡ ಸಾಹಿತ್ಯ ಅಧ್ಯಯನದಲ್ಲಿ ಆಸಕ್ತಿ ಮೂಡಿಸುವುದು.
(ಹಳಗನ್ನಡ ಓದುವುದು,ಬರೆಯುವುದು,ಅರ್ಥೈಸಿಕೊಳ್ಳುವುದು)
2.ತಾಳ್ಮೆ,ಸತ್ಯ,ಸಹಕಾರ,ಹೊಂದಾಣಿಕೆ ಮುಂತಾದ ಗುಣಗಳ ಬಗ್ಗೆ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು:** ಕವಿ– ಕಾವ್ಯ–ಪರಿಚಯ ಚಾರ್ಟ್,ಕಥೆಯ ವಿಡಿಯೋ,ವಿಡಿಯೋ ಪ್ಲೇಯರ್(ಡಿಜಟಲ್ ಕ್ಲಾಸ್) ಪಂಚತಂತ್ರ ಕತೆ ಪುಸ್ತಕಗಳು,ಹಳಗನ್ನಡ–ಹೊಸಗನ್ನಡ ಶಬ್ದಕೋಶ

| **ಅವಧಿ** | **ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
|---|---|---|---|---|---|
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ** |
| | 1.ದುರ್ಗಸಿಂಹನ ಪರಿಚಯ<br><br>2.ಹೊನ್ನ ಕದ್ದ ದುಷ್ಟಬುದ್ಧಿ | **ಪ್ರೇರಣಾ ಚಟುವಟಿಕೆ :**<br><br>ಹಳಗನ್ನಡ ಕವಿಗಳನ್ನು ಪಟ್ಟಿಮಾಡಿಸುವುದು. ಆಮೂಲಕ ದುರ್ಗಸಿಂಹ ಕವಿಯ ಪರಿಚಯಿಸುವುದು. ಸತ್ಯದ ಬಗ್ಗೆ ಇರುವ(ಸತ್ಯವಾದಿ ಸುದಾಮ,ಹರಿಶ್ಚಂದ್ರನ ಕತೆ) ಯಾವುದಾದರೂ ಒಂದು ಕತೆಯನ್ನು ಹೇಳಿ "ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ" ಎಂಬುದರ ಬಗ್ಗೆ ವಿದ್ಯಾರ್ಥಿ ಗಳಲ್ಲಿ ಅರಿವು ಮೂಡಿಸುವುದು. | ಕವಿಗಳ ಪಟ್ಟಿ ಮಾಡಿಸುವುದು<br><br>ಕಥೆ ಹೇಳುವುದು | ಕಪ್ಪುಹಲಗೆ<br><br>ಕಥೆ ಪುಸ್ತಕ | 1.ಹಳಗನ್ನಡದ ಕವಿಗಳನ್ನು ಹೆಸರಿಸಿ<br>2.ಪಂಚತಂತ್ರ ಕೃತಿಯ ಕರ್ತೃ ಯಾರು ?<br>3.ಕಥೆಯಲ್ಲಿ ಬರುವ ಸತ್ಯವಾದಿ ಯಾರು ?<br>4.ಸತ್ಯಕ್ಕೆ ಸಾವಿಲ್ಲ:_______ (ಪೂರ್ಣಗೊಳಿಸಿ)<br>5.ದುಷ್ಟಬುದ್ಧಿ ಧರ್ಮಬುದ್ಧಿಯ ಬಳಿ ಏಕೆ ಬಂದನು<br>6.ದುಷ್ಟಬುದ್ಧಿ ಧರ್ಮಬುದ್ಧಿಯ ಮೇಲೆ ಯಾವ ಆರೋಪ |

| | | | | | |
|---|---|---|---|---|---|
| | 3.ವೃಕ್ಷಸಾಕ್ಷಿ ಕೇಳುವುದು<br>4.ಪ್ರೇಮಮತಿಯ ಸುಳ್ಳು ನುಡಿ<br>5.ಧರ್ಮಬುದ್ಧಿಯ ಸಾಕ್ಷ್ಯತಂತ್ರ<br>6.ಸೈದ್ಧಾಂತಿಕ ಭಾಷಾಭ್ಯಾಸ<br>**ಛಂದಸ್ಸು**<br>ವೃತ್ತಗಳು, ಕಂದಪದ್ಯ | **ಪಾಠಪ್ರಕ್ರಿಯೆಗಳು**<br>ಪಂಚತಂತ್ರ ಕಥೆಯ ವೀಡಿಯೋವನ್ನು ತೋರಿಸುವುದು,ವಿಡಿಯೋದ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು ನಂತರ ಗದ್ಯಭಾಗವನ್ನು ಓದುವುದು,ಪದಗಳ ವಿಂಗಡಣೆ ಓದು,ವಿದ್ಯಾರ್ಥಿಗಳಿಂದ ಓದಿಸುವುದು,ನಂತರ ಶಬ್ದಕೋಶ ಉಪಯೋಗಿಸಿಕೊಂಡು ಕೆಲವು ಪದಗಳಿಗೆ ಅರ್ಥ ಹುಡುಕುವಂತೆ ಪ್ರೇರೇಪಿಸುವುದು.ಗದ್ಯಭಾಗವನ್ನು ಓದುತ್ತ ಅರ್ಥೈಸುವುದು.ಕಥೆಯ ಸಾರಾಂಶವನ್ನು ಹೇಳುವುದು,ವಿದ್ಯಾರ್ಥಿಗಳಿಂದ ಹೇಳಿಸುವುದು, ಕಥೆಯ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು, “ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ” ಎಂಬುದನ್ನು ತಿಳಿಸುವುದು, ಪ್ರಶ್ನೋತ್ತರ ಚರ್ಚೆ ಮಾಡುವುದು.<br>ವೃತ್ತಗಳು,ಕಂದಪದ್ಯಗಳ ಸ್ಲೈಡ್ ಶೋ ಬಳಸಿಕೊಂಡು ವಿವರಿಸುವುದು,ವಿದ್ಯಾರ್ಥಿಗಳಿಂದ ಪ್ರಸ್ತಾರ ಹಾಕಿಸುವುದು,ಛಂದಸ್ಸು ಗುರುತಿಸುವುದು | ವೀಡಿಯೋ ತೋರಿಸುವುದು<br>ಕಥೆ ಬರೆಸುವುದು<br>ಪದಗಳ ಅರ್ಥ ಹುಡುಕಿಸುವುದು<br>ಕಥೆಯ ಸಾರಾಂಶವನ್ನು ಬರೆಸುವುದು<br>ಗಾದೆ ಮಾತು ವಿವರಣೆ<br>ಪ್ರಶ್ನೋತ್ತರ<br>ಸ್ಲೈಡ್ ಶೋ ತೋರಿಸಿವುದು<br>ಪ್ರಸ್ತಾರ ಹಾಕಿಸುವುದು, ಛಂದಸ್ಸು ಗುರುತಿಸುವುದು | ವಿಡಿಯೋ ಪ್ಲೇಯರ್ (ಡಿಜಟಲ್ ಕ್ಲಾಸ್)<br>ಕಪ್ಪು ಹಲಗೆ<br>ಶಬ್ಧ ಕೋಶಗಳು<br>ನೋಟ್ ಪುಸ್ತಕಗಳು<br>ಪ್ರಶ್ನಾಕೋಶ<br>ಸ್ಲೈಡ್ ಶೋ (ಡಿಜಟಲ್ ಕ್ಲಾಸ್)<br>ಕಪ್ಪುಹಲಗೆ | ಹೊರಿಸಿದನು ?<br>7.ದುಷ್ಟಬುದ್ಧಿಧರ್ಮಬುದ್ಧಿಯರು ನ್ಯಾಯ ತೀರ್ಮಾನಕ್ಕಾಗಿ ಎಲ್ಲಿಗೆ ಬಂದರು ?<br>8.ವೃಕ್ಷವನ್ನು ಸಾಕ್ಷಿಮಾಡಿದ್ದು ಏಕೆ?ಮತ್ತು ಯಾರು ?<br>9.ದುಷ್ಟಬುದ್ಧಿ ಸುಳ್ಳು ಸಾಕ್ಷಿ ಹೇಳಿಸಲು ಯಾರಲ್ಲಿ ಒತ್ತಾಯಿಸಿದನು ?<br>10.ಧರ್ಮಬುದ್ಧಿ ಬೆಳಗಿನ ಸಮಯವನ್ನು ಹೇಗೆ ಕಳೆದನು?<br>11.ವಟವೃಕ್ಷದ ಬಳಿ ಧರ್ಮಾಧಿಕರಣರು ಏಕೆ ಬಂದರು ?<br>12.ಧರ್ಮಬುದ್ಧಿ ಸುಳ್ಳುಸಾಕ್ಷಿಯನ್ನು ಹೇಗೆ ಪತ್ತೆಹಚ್ಚಿದನು?<br> |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ :ವೀರಲವ (ಪದ್ಯ) ಲಕ್ಷ್ಮೀಶ**

**ಬೋಧನೆಯ ಉದ್ದೇಶಗಳು** :1.ಹಳಗನ್ನಡ ಷಟ್ಪದಿ ಸಾಹಿತ್ಯ ಅಧ್ಯಯನದಲ್ಲಿ ಆಸಕ್ತಿ ಮೂಡಿಸುವುದು.
(ಹಳಗನ್ನಡ ಓದುವುದು,ಬರೆಯುವುದು,ಅರ್ಥೈಸಿಕೊಳ್ಳುವುದು ಛಂದಸ್ಸು )
2.ಕರ್ತವ್ಯನಿಷ್ಠೆ,ಧೈರ್ಯ,ಸಾಹಸ,ತಾಳ್ಮೆ,ಸತ್ಯ,ಮುಂತಾದ ಗುಣಗಳ ಬಗ್ಗೆ ಅರಿವು ಮೂಡಿಸುವುದು.

**ಕಲಿಕಾ ಸಾಮಗ್ರಿಗಳು:** ಕವಿ- ಕಾವ್ಯ-ಪರಿಚಯ ಚಾರ್ಟ್‌ಫೋಟೋ ,ಲವಕುಶ ಕಥೆಯ ವಿಡಿಯೋ,ವಿಡಿಯೋ ಪ್ಲೇಯರ್(ಡಿಜಟಲ್ ಕ್ಲಾಸ್) ರಾಮಾಯಣ ಕತೆ ಪುಸ್ತಕಗಳು,ಹಳಗನ್ನಡ-ಹೊಸಗನ್ನಡ ಶಬ್ದಕೋಶ

| ಅವಧಿ | ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | 1.ಲಕ್ಷ್ಮೀಶ ಕವಿ ಪರಿಚಯ<br><br>2.ಪೂರ್ವಕತೆ | **ಪ್ರೇರಣಾ ಚಟುವಟಿಕೆ :** ರಾಮಾಯಣ,ಮಹಾಭಾರತ ವಿಷಯದ ಕೃತಿಗಳನ್ನು ಬರೆದ ಕವಿಗಳನ್ನು ಪಟ್ಟಿಮಾಡಿಸುವುದು. ಹಳಗನ್ನಡ,ನಡುಗನ್ನಡ ಕವಿಗಳ ಭಾವಚಿತ್ರಗಳನ್ನು ತೋರಿಸುತ್ತ ಲಕ್ಷ್ಮೀಶ ಕವಿಯ ಚಿತ್ರ ಗುರುತಿಸುವುದು ಆಮೂಲಕ ಲಕ್ಷ್ಮೀಶ ಕವಿಯ ಪರಿಚಯಿಸುವುದು ನಂತರ ಭೀಮ-ಘಟೋತ್ಕಚರ.ಅರ್ಜುನ-ಬಬ್ರುವಾಹನರ ಕಾಳಗದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವುದು<br>**ಪಾಠಪ್ರಕ್ರಿಯೆಗಳು**<br>ಲವಕುಶ ಕಥೆಯ ವೀಡಿಯೋವನ್ನು ತೋರಿಸುವುದು, ವೀಡಿಯೋದಲ್ಲಿ ಬರುವ ಪಾತ್ರಗಳ ಬಗ್ಗೆ ಇರುವ ಪುಸ್ತಕ ಭಾಗಗಳನ್ನು | ಕವಿಗಳ ಪಟ್ಟಿ ಮಾಡಿಸುವುದು<br><br>ಕವಿಚಿತ್ರ ಗುರುತಿಸುದು<br><br>ಕಥೆ ಹೇಳುವುದು | ಕಪ್ಪುಹಲಗೆ<br><br>ಕವಿಗಳ ಚಿತ್ರಗಳು<br><br>ಕಥೆ ಪುಸ್ತಕ | 1.ರಾಮಾಯಣ, ಮಹಾಭಾರತಗಳನ್ನು ಬರೆದ ಕವಿಗಳನ್ನು ಹೆಸರಿಸಿ.<br>2.ಲಕ್ಷ್ಮೀಶ ಕವಿ ಬರೆದ ಕೃತಿ ಯಾವುದು ?<br><br>3.ಘಟೋತ್ಕಚನ ತಂದೆ ಯಾರು ? |

| | | | | | |
|---|---|---|---|---|---|
| | 3.ಆಶ್ರಮ ಹೊಕ್ಕಿದ ರಾಮನ ಯಜ್ಞಾಶ್ವ<br><br>4.ಯಜ್ಞಾಶ್ವ ಹಣೆಯಲ್ಲಿನ ಪಟ್ಟದ ಲಿಖಿತನೋದಿದಲವ<br><br>5.ಲವ–ಮುನಿಸುತರ ಸಂವಾದ<br><br>6.ಸೈದ್ಧಾಂತಿಕ ಭಾಷಾಭ್ಯಾಸ ರಗಳೆ, ವಾರ್ಧಕ ಷಟ್ಪದಿ | ಓದಿಸುವುದು ನಂತರ ಪದ್ಯಭಾಗದ ಪೂರ್ವಕತೆಯನ್ನು ಹೇಳುವುದು, ,ಪದಗಳ ವಿಂಗಡಣೆ ಓದು,ವಿದ್ಯಾರ್ಥಿಗಳಿಂದ ಓದಿಸುವುದು, ನಂತರ ಶಬ್ದಕೋಶ ಉಪಯೋಗಿಸಿಕೊಂಡು ಕೆಲವು ಪದಗಳಿಗೆ ಅರ್ಥ ಹುಡುಕುವಂತೆ ಪ್ರೇರೇಪಿಸುವುದು.ಪದ್ಯ ಭಾಗವನ್ನು ಗಮಕದಲ್ಲಿ ಹಾಡಿರುವುದನ್ನು ಆಡಿಯೋ ಮೂಲಕ ಕೇಳಿಸುವುದು ನಂತರ ಶಿಕ್ಷಕರು ಸ್ವತಃ ಗಮಕದಲ್ಲಿ ಹಾಡುತ್ತ ಅರ್ಥೈಸುವುದು.ಪದ್ಯದ ಸಾರಾಂಶವನ್ನು ಹೇಳುವುದು, ವಿದ್ಯಾರ್ಥಿಗಳಿಂದ ಹೇಳಿಸುವುದು, ಪದ್ಯದ ಸಾರಾಂಶವನ್ನು ವಿದ್ಯಾರ್ಥಿಗಳಿಂದ ಬರೆಸುವುದು (ಶಬ್ದಾರ್ಥಕೋಶ ಬಳಸಿ)ಆ ಮೂಲಕ ಲವನ ಸಾಹಸ ಧೈರ್ಯಗಳನ್ನು ವರ್ಣಿಸುವುದು . ಪ್ರಶ್ನೋತ್ತರ ಚರ್ಚೆ ಮಾಡುವುದು. ಪ್ರಸ್ತಾರ ಹಾಕಿ ಛಂದಸ್ಸು ಗುರುತಿಸಿರುವ ರಗಳೆ,ಷಟ್ಪದಿಗಳ ಸ್ಲೈಡ್ ಶೋ ಬಳಸಿಕೊಂಡು ವಿವರಿಸುವುದು,ವಿದ್ಯಾರ್ಥಿಗಳಿಂದ ಪ್ರಸ್ತಾರ ಹಾಕಿಸುವುದು,ಛಂದಸ್ಸು ಗುರುತಿಸುವುದು | ವೀಡಿಯೋ ತೋರಿಸುವುದು<br><br>ಪದಗಳ ಅರ್ಥ ಹುಡುಕಿಸುವುದು<br><br>ಕೇಳಿಸುವುದು<br><br>ಪದ್ಯದಸಾರಾಂಶವನ್ನು ಬರೆಸುವುದು ಗಾದೆ ಮಾತು ವಿವರಣೆ<br><br>ಪ್ರಶ್ನೋತ್ತರ<br><br>ಸ್ಲೈಡ್ ಶೋ ತೋರಿಸಿವುದು ಪ್ರಸ್ತಾರ ಹಾಕಿಸುವುದು, ಛಂದಸ್ಸು ಗುರುತಿಸುವುದು | ವಿಡಿಯೋ ಪ್ಲೇಯರ್ (ಡಿಜಟಲ್ ಕ್ಲಾಸ್) ಶಬ್ಧ ಕೋಶಗಳು<br><br>ಆಡಿಯೋ ಪ್ಲೇಯರ್<br><br>ನೋಟ್ ಪುಸ್ತಕಗಳು, ಪಠ್ಯ ಪುಸ್ತಕಗಳು<br><br>ಪ್ರಶ್ನಾಕೋಶ<br><br>ಸ್ಲೈಡ್ ಶೋ (ಡಿಜಟಲ್ ಕ್ಲಾಸ್)<br><br>ಕಪ್ಪುಹಲಗೆ | 4.ಯಜ್ಞಾಶ್ವ ಯಾರದ್ದು ?<br><br>5.ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತ್ತು ?<br><br>6.ಯಜ್ಞಾಶ್ವದ ಹಣೆಯ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?<br><br>7.ಯಜ್ಞಾಶ್ವದ ಕುದುರೆಯನ್ನು ಕಟ್ಟಿದವರು ಯಾರು ?<br><br>8.ಲವನು ಯಜ್ಞದ ಕುದುರೆಯನ್ನು ಯಾವುದರಿಂದ ಕಟ್ಟಿದನು ? |

**ವಿಷಯ : ಪ್ರಥಮ ಭಾಷೆ ಕನ್ನಡ** **ಪಾಠ ಯೋಜನೆ** **ತರಗತಿ : 10**

**ಪಾಠದ ಶೀರ್ಷಿಕೆ : ವ್ಯಾಘ್ರಗೀತೆ (ಗದ್ಯ) ಎ.ಎನ್.ಮೂರ್ತಿರಾವ್**

**ಬೋಧನೆಯ ಉದ್ದೇಶಗಳು** :1.ವಿದ್ಯಾರ್ಥಿಗಳಲ್ಲಿ ಲಲಿತ ಪ್ರಬಂಧಗಳನ್ನು ರಚಿಸುವ ಸಾಮರ್ಥವನ್ನು ಮೂಡಿಸುವುದು.
2.ಶಾನುಭೋಗರಂತೆ ಕರ್ತವ್ಯನಿಷ್ಠೆ,ಪ್ರಾಮಾಣಿಕತೆ,ಸಮಯ ಪ್ರಜ್ಞೆ,ಧೈರ್ಯ,ತತ್ಕ್ಷಣ ಸಮಸ್ಯೆಪರಿಹಾರ ಯೋಚನೆ, ಮತ್ತು ಧರ್ಮಶ್ರದ್ಧೆ ಮುಂತಾದ ಗುಣಗಳನ್ನು ಕಲಿಸುವುದು.

**ಕಲಿಕಾ ಸಾಮಗ್ರಿಗಳು:** ಕವಿ–ಕಾವ್ಯ–ಪರಿಚಯದ ಸ್ಲೈಡ್‌ಶೋ,ಗೋವಿನಹಾಡು ವೀಡಿಯೋ,ಮಾದರಿ ಖಿರ್ದಿ ಪುಸ್ತಕ, ನಾಮಪದಗಳು, ಕೃದಂತಗಳ ಚಾರ್ಟು

| **ಅವಧಿ** | **ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
|---|---|---|---|---|---|
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ** |
| | 1.ಕವಿ–ಕಾವ್ಯ ಪರಿಚಯ<br><br>2.ಭರತ ಭೂಮಿಯ ಹುಲಿಗಳು<br><br>3.ಶಾನಭೋಗರ ಇರಸಾಲಿ<br><br>4.ಶಾನಭೋಗರ ಬೇಟೆಗೆ ಹುಲಿಯ ತಂತ್ರ | **<u>ಪ್ರೇರಣಾ ಚಟುವಟಿಕೆ:</u>**<br>ಪಂಪ ಪ್ರಶಸ್ತಿ ಪಡೆದ ಕವಿಗಳ ಪಟ್ಟಿ ತಯಾರಿಸುವುದು,ನಂತರ ಕವಿ ಮೂರ್ತಿರಾವ್ ರ ಕವಿ ಪರಿಚಯದ ಸ್ಲೈಡ್‌ಶೋವನ್ನು ಪ್ರೊಜೆಕ್ಟರ್ ಮೂಲಕ ತೋರಿಸುವುದು ಆ ಮೂಲಕ ಕವಿ ಪರಿಚಯ ಮಾಡಿಸುವುದು<br>**ಪಾಠಪ್ರಕ್ರಿಯೆಗಳು:** ಗೋವಿನ ಹಾಡಿನ (ಪುಣ್ಯಕೋಟಿ ಕತೆ) ವೀಡಿಯೋವನ್ನು ತೋರಿಸುವುದು , ನಂತರ ಹಸುವಿನ ಪ್ರಾಮಾಣಿಕತೆ,ಹಾಗೂ ಹುಲಿಯ ಧರ್ಮಶ್ರದ್ಧೆಯನ್ನು ಮೆಚ್ಚುವಂತೆ | ಕವಿಗಳ ಪಟ್ಟಿ ಮಾಡಿಸುವುದು<br><br>ಕವಿಚಿತ್ರ ವೀಕ್ಷಣೆ<br><br>ವೀಡಿಯೋ ತೋರಿಸುವುದು | ಕಪ್ಪುಹಲಗೆ<br><br>ಕವಿ ಪರಿಚಯದ ಸ್ಲೈಡ್‌ಶೋ (ಡಿಜಟಲ್ ಕ್ಲಾಸ್)<br>ವಿಡಿಯೋ ಪ್ಲೇಯರ್ (ಡಿಜಟಲ್ | 1.ಪಂಪ ಪ್ರಶಸ್ತಿ ಪಡೆದ ಕವಿಗಳನ್ನು ಹೆಸರಿಸಿ.<br>2.ಬೆಕ್ಕು ಯಾವ ಜಾತಿಗೆ ಸ್ಥರಿದೆ ?<br>3.ಭಗವದ್ಗೀತೆಯನ್ನು ರಚಿಸಿದವರು ಯಾರು ?<br>4.ಶಾನುಭೋಗರು ಚಿಕ್ಕನಾಕನ ಹಳ್ಳಿಗೆ ಏಕೆ ಹೋಗಿದ್ದರು ?<br>5.ಹಸಿದು ಮಲಗಿದ್ದ ಹುಲಿಯ ಯೋಚನೆ ಏನಾಗಿತ್ತು ? |

| | | | | | |
|---|---|---|---|---|---|
| | 5.ಶಾನಭೋಗರ ಪ್ರತಿ ತಂತ್ರ<br><br>6.ಶಾನಭೋಗರ ಉಳಿವು<br><br>7.ಹುಲಿಯ ಧರ್ಮಶ್ರದ್ಧೆಯ ನೆನೆಹು<br><br>8.ಸೈದ್ಧಾಂತಿಕ ಭಾಷಾಭ್ಯಾಸ ನಾಮಪದ, ಕೃದಂತಗಳು | ಮಾಡುವುದು, ಪಾಠವನ್ನು ಗಟ್ಟಿಯಾಗಿ ವಾಚಿಸುವುದು. ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು ಮಾಡಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುತ್ತಾ ಸಂವಹನ ನಡೆಸುವುದು.<br>ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯುವಂತೆ ಪ್ರೇರಿಪಿಸುವುದು.<br><br>ನಾಮಪದಗಳು, ಕೃದಂತಗಳ ಚಾರ್ಟ್ ಬಳಸಿಕೊಂಡು ಅವುಗಳ ಬಗ್ಗೆ ವಿವರಿಸಿ ಉದಾಹರಣೆ ನೀಡುವುದು | ಪ್ರಶ್ನೋತ್ತರ<br><br>ಬರವಣಿಗೆ<br><br>ಉದಾಹರಣೆಗಳನ್ನು ಬರೆಸುವುದು | ಕ್ಲಾಸ್)<br><br>ಪ್ರಶ್ನಾಕೋಶ<br><br>ಪ್ರಬಂಧದ ವಿಷಯಗಳು<br><br>ಕಪ್ಪುಹಲಗೆ | 6.ಶಾನುಭೋಗರು ಯಾವ ಕಣಿವೆಯನ್ನು ದಾಟಿ ಬರಬೇಕಾಗಿತ್ತು ?<br>7.ಹುಲಿಗೆ ಪರಮಾನಂದ ವಾದದ್ದು ಏಕೆ ?<br>8.ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು ?<br>9.ರೈತರು ಚಿಕ್ಕನಾಯಕನ ಹಳ್ಳಿಗೆ ಏಕೆ ಹೋಗಿದ್ದರು?<br>10.ಶಾನುಭೋಗರ ಬ್ರಹ್ಮಾಸ್ತ್ರಯಾವುದಾಗಿತ್ತು ? |

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಸಾರ್ಥಕತೆ (ಪದ್ಯ) ದು.ಸರಸ್ವತಿ ,ಇಂದುಮತಿ ಲಮಾಣಿ**

**ಬೋಧನೆಯ ಉದ್ದೇಶಗಳು** :1.ವಿದ್ಯಾರ್ಥಿಗಳಲ್ಲಿ ಶಾಂತಿ ಸಂದೇಶವನ್ನು ಮೂಡಿಸುವುದು.
2.ಸಂಕಟ ಕಾಲ,ದೇಶ, ಗಡಿಗಳನ್ನು ಮೀರಿ ಇರುತ್ತದೆ ಎಂಬುದನ್ನು ಅರ್ಥೈಸುವುದು
3.ಪರೋಪಕಾರ ಗುಣಗಳನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು**: ಕವಿ–ಕಾವ್ಯ–ಪರಿಚಯದ(ದು.ಸರಸ್ವತಿ ,ಇಂದುಮತಿ ಲಮಾಣಿ)ಸ್ಲೈಡ್‌ಶೋ,ಕಾರ್ಗಿಲ್ ಕದನದ ವೀಡಿಯೋ,

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ |
| | ಲೇಖಕಿಯರ ಪರಿಚಯ<br><br>1.ಸಂಕಟಕೆ ಗಡಿಯಿಲ್ಲ<br><br>ಮಾನವ ಮಣ್ಣಿನಮಾಲಿಕ<br><br>ಗಡಿ–ಕಾದಾಟ ಸಂಕಟ | **ಪ್ರೇರಣಾ ಚಟುವಟಿಕೆ**:<br>ಮಹಿಳಾ ಲೇಖಕಿಯರ ಹೆಸರುಗಳನ್ನು ಪಟ್ಟಿ ಮಾಡಿಸುವುದು,ನಂತರ ಸ್ಲೈಡ್‌ಶೋ ಮೂಲಕ ಪದ್ಯದ ಲೇಖಕಿಯರ ಪರಿಚಯ ಮಾಡಿಸುವುದು<br><br>**ಪಾಠಪ್ರಕ್ರಿಯೆಗಳು**: ಕಾರ್ಗಿಲ್ ಕದನದ ವೀಡಿಯೋವನ್ನು ತೋರಿಸಿ ಅಲ್ಲಿ ಸಂಭವಿಸಿದ ಘಟನೆಗಳಿಂದ ಭಾರತ ಮತ್ತು ಪಾಕಿಸ್ತಾನದ ಅಂದರೆ ಎರಡು ಕಡೆಯ ಸೈನಿಕರು ಮರಣಹೊಂದಿದರು ,ಇದರಿಂದ ಎರಡು ಕಡೆ ನೋವು ಅನುಭವಿಸಿದರು ಎಂಬುದನ್ನು | ಲೇಖಕಿಯರ ಹೆಸರಿನ ಪಟ್ಟಿ ತಯಾರಿಸುವುದು<br>ಲೇಖಕಿಯರ ಪರಿಚಯ<br><br>ವೀಡಿಯೋ ವನ್ನು ತೋರಿಸುವುದು | ಹೊಸಗನ್ನಡ ಸಾಹಿತ್ಯ ಚರಿತ್ರೆಪುಸ್ತಕ<br>ಸ್ಲೈಡ್‌ಶೋ<br><br>ವಿಡಿಯೋ ಪ್ಲೇಯರ್ (ಡಿಜಟಲ್ ಕ್ಲಾಸ್) | 1.ಹೊಸಗನ್ನಡ ಸಾಹಿತ್ಯ ಬರೆಯುವ ಮಹಿಳಾ ಲೇಖಕಿಯರನ್ನು ಹೆಸರಿಸಿ<br>2.ದು.ಸರಸ್ವತಿಯವರ ಸ್ಥಳ ಹೆಸರಿಸಿ<br><br>3.ನನ್ನಾಸೆ ಪದ್ಯದ ಲೇಖಕಿ ಯಾರು ?<br><br>4.ಮಣ್ಣಿನ ಮಾಲಿಕ ಯಾರು?<br><br>5.ಮಾನವನ ಕಾದಾಟಕ್ಕೆ |

| | | | | | |
|---|---|---|---|---|---|
| | 2.ನನ್ನಾಸೆ<br>ಬತ್ತಿ-ಬೆಳಕು<br>ಮರವಾಗು,<br>ಬತ್ತದವರತೆ,<br>ಜೋಗುಳ,<br>ವಾಗ್ದೇವಿಗ್ರಂಥ,<br>ಊರುಗೋಲು<br>ಸೈದ್ಧಾಂತಿಕ ಭಾಷಾಭ್ಯಾಸ<br>ಅಲಂಕಾರ<br>ಅರ್ಥಾಂತರನ್ಯಾಸಾಲಂಕಾರ<br>ಇತರೆ ವ್ಯಾಕರಣಾಂಶಗಳು | ಅರ್ಥೈಸುವುದು.ನಂತರ ಪದ್ಯವನ್ನು ಆಡಿಯೋ ಮೂಲಕ ಕೇಳಿಸುವುದು, ಸ್ವತಃ ಶಿಕ್ಷಕರು ಹಾಡುವುದು,ವಿದ್ಯಾರ್ಥಿಗಳಿಂದ ಹಾಡಿಸುವುದು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು ಸಾರಾಂಶ ಬರೆಸುವುದು<br>ನಂತರ ನೀನಾರಿಗಾದಲೆ ಮಾನವ ನಾನು ಹರಿಃ ಹರಿಃ ಗೋವು ಎಂಬ ಪೂರಕ ಸಾಹಿತ್ಯ ಪದ್ಯವನ್ನು ಹಾಡಿ,ಅರ್ಥೈಸಿ ನನ್ನಾಸೆ ಪದ್ಯವನ್ನು ಹಾಡುವುದು,ವಿದ್ಯಾರ್ಥಿಗಳಿಂದ ಸಾಮೂಹಿವಾಗಿ ಹಾಡಿಸುವುದು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು ಸಾರಾಂಶ ಬರೆಸುವುದು<br>ಅಲಂಕಾರಗಳ ಚಾರ್ಟ್ ಮತ್ತು ಸ್ಲೈಡ್‌ಶೋಗಳೊಂದಿಗೆ ಅಲಂಕಾರಗ ವಿವರಣೆ,ವಿದ್ಯಾರ್ಥಿಗಳು ಗುರುತಿಸಲು ಪ್ರೇರೇಪಿಸುವುದು. | ಪದ್ಯದ ಆಡೀಯೋ ಕೇಳಿಸುವುದು<br>ಬರವಣಿಗೆ<br>ಅಲಂಕಾರ ಗುರುತಿಸು ವುದು | ಆಡಿಯೋ ಪ್ಲೇಯರ್<br>ಕಪ್ಪುಹಲಗೆ<br>ಕಪ್ಪುಹಲಗೆ | ಕಾರಣವೇನು?<br>6.ಗಡಿ ಆಚೆ-ಈಚೆ ಹರಿದಿದ್ದು ಏನು ?<br>7.ಯಾರಿಗೆ ನೆರಲಾಗಬೇಕೆಂದು ಕವಯತ್ರಿ ಬಯಸಿದ್ದಾರೆ?<br>8.ದಾಹಗೊಂಡವರ ತಣಿವ ತಣಿಸಲು ಏನಾಗಬೇಕು?<br>9.ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ? |

<table>
<tr><td rowspan="2">ಅವಧಿ</td><td rowspan="2">ಕಲಿಕಾ ಸಾಮರ್ಥ್ಯಗಳು/ ಉಪಘಟಕಗಳು</td><td rowspan="2">ಕಲಿಕಾ/ಬೋಧನಾ ಚಟುವಟಿಕೆಗಳು</td><td colspan="3">ಮೌಲ್ಯಮಾಪನ</td></tr>
<tr><td>ತಂತ್ರಗಳು</td><td>ಸಾಧನಗಳು</td><td>ಪ್ರಶ್ನಾಕೋಶ</td></tr>
<tr><td></td><td></td><td></td><td></td><td></td><td></td></tr>
</table>

## ಶಾಲೆಯ ಹೆಸರು:

## INTERNAL ASSESSMENT FOR 10TH STANDARD 201 -1

## MARKS STATEMENT

## ವಿಷಯ: ಕನ್ನಡ

| ಕ್ರ ಸಂ | ವಿದ್ಯಾರ್ಥಿಯ ಹೆಸರು | FA1 | | | | FA2 | | | | TO FA-1+2 | 25% | S.A-1 | TO FA-1,2,SA-1 | GREED | FA3 | | | | FA4 | | | | TO FA-3+4 | 25% | SA-2 PREPA | TO FA-3,4,SA-2 | GREED | FA 1,2,3,4 TO - 200 | **25% (kan lan)** |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | A1 -15 | A2 -15 | T1 - 20 | Total - 50 | A3 - 15 | A4-15 | T2 - 20 | TO-50 | 100 | | 100 | 125 | | A5 - 15 | A6- 15 | T3 -20 | TO -50 | A7- 15 | A8- 15 | T4 -20 | TO-50 | 100 | | 100 | 125 | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | |